ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ವಡೋದರದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಸರಣಿಯ ಮೊದಲ ಏಕದಿನ ಪಂದ್ಯ ಇಂದಿನಿಂದ (ಭಾನುವಾರ) ಆರಂಭವಾಗಲಿದೆ...


11 ಜನವರಿ 2026 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 299 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629






ಸುವರ್ಣ ಇತಿಹಾಸ ಬರೆದ ಬಂಗಾರದ ಮನುಷ್ಯ » 2





ಸಾಮಾಜಿಕ ಸಂಬಂಧಗಳು » 3


ಸಕಲೇಶಪುರ ಕ್ಷೇತ್ರಕ್ಕೆ ಎಷ್ಟು ಅನುದಾನ ತಂದಿದ್ದಾರೆ? » 4


# ಪಾರದರ್ಶಕತೆಗಾಗಿ ವಿಬಿ-ಜಿ-ರಾಮ್-ಜಿ

## ಕಾಂಗ್ರೆಸ್ ಅಪಪ್ರಚಾರಕ್ಕೆ ಮಾಜಿ ಸಚಿವ ಸಿ.ಟಿ.ರವಿ ವಾಗ್ದಾಳಿ

• ಪ್ರಜೋದಯ ವರದಿ

**ಹಾಸನ:** ಅಧಿಕಾರಿಗಳು, ಗುತ್ತಿಗೆದಾರರಿಗೆ ಲಾಭ ಮಾಡಿಕೊಡುತ್ತಿದ್ದ ನರೇಗಾ ಯೋಜನೆ ಯನ್ನು ವಿಬಿ-ಜಿ-ರಾಮ್-ಜಿ ಎಂದು ಪರಿವರ್ತನೆಗೊಳಿಸಿ, ಪಾರದರ್ಶಕ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪರಿಷ್ಕರಣೆ ಮಾಡಲಾಗಿದೆ. ಕಾಂಗ್ರೆಸ್ ಉದ್ದೇಶ ಪೂರ್ವಕವಾಗಿ ಅಪಪ್ರಚಾರ ಮಾಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ದೂರಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಉದ್ದೇಶ ಜನರಿಗೆ ಉದ್ಯೋಗ ನೀಡುವುದರ ಜೊತೆಗೆ ಗ್ರಾಮೀಣಾಭಿವೃದ್ಧಿ ಸಾಧಿಸುವುದಾಗಿದೆ. ಮಹಾತ್ಮ ಗಾಂಧೀಜಿ ಅವರ ಆಶಯಗಳನ್ನು ಸಾಕಾರಗೊಳಿಸುವ ಉದ್ದೇಶದಿಂದ ನರೇಗಾ ಯೋಜನೆಯಲ್ಲಿ ಬದಲಾವಣೆ ಮಾಡಲಾಗಿದೆ. ಕಾಂಗ್ರೆಸ್‌ನವರು ಜನರ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುತ್ತದೆಂದು ಸುಳ್ಳು ಹೇಳುತ್ತಿದ್ದಾರೆ. ವಾಸ್ತವವಾಗಿ 100 ದಿನಗಳಿಂದ 125 ದಿನಕ್ಕೆ ಏರಿಸಲಾಗಿದೆ ಎಂದು ತಿಳಿಸಿದರು.

ವಿಬಿ-ಜಿ-ರಾಮ್-ಜಿ ಯೋಜನೆಯಲ್ಲಿ ಕೆಲವು ಅಗತ್ಯ ಮಾರ್ಪಾಡುಗಳನ್ನು ಮಾಡಲಾಗಿದೆ. ಕಾಂಗ್ರೆಸ್ ಅಧಿಕಾರಿಗಳು ಹಾಗು ಗುತ್ತಿಗೆದಾರರ ಲಾಭಕ್ಕಾಗಿ ನರೇಗಾ ಯೋಜನೆ ರೂಪಿಸುತ್ತಿದೆ. ಆದರೆ ಬಿಜೆಪಿ ಸರ್ಕಾರ ಉದ್ಯೋಗ ಸೃಷ್ಟಿಸುವ ಜೊತೆಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಹೇಳಿದರು.

ಸತ್ಯ ಹೊಸ್ತಿಲು ದಾಟುವ ಮುನ್ನ ಸುಳ್ಳು ಊರು ಸುತ್ತಾಡುತ್ತದೆಂಬ ಮಾತಿನಂತೆ ಕಾಂಗ್ರೆಸ್ ನಡೆದು ಕೊಳ್ಳುತ್ತಿದೆ. ಗ್ರಾಮೀಣ ಜನರ ಉದ್ಯೋಗ ಕಸಿದುಕೊಳ್ಳಲಾಗುತ್ತಿಲ್ಲ. ಬದಲಾಗಿ ಕೆಲಸದ ದಿನಗಳನ್ನು ಹೆಚ್ಚಿಸಲಾಗಿದೆ. ಹಿಂದೆ ತಿಂಗಳುಗಳಾದರೂ ವೇತನ ಸಿಗುತ್ತಿರಲಿಲ್ಲ, ಈಗ ಕೇವಲ 14 ದಿನಗಳೊಳಗೆ ವೇತನ ಪಾವತಿ ವ್ಯವಸ್ಥೆ ಮಾಡಲಾಗಿದೆ. ಗ್ರಾಮ ಪಂಚಾಯಿತಿ ಅಧಿಕಾರ ಕಡಿತವಾಗಿದೆ ಎಂಬ ಆರೋಪವನ್ನು ತಳ್ಳಿ ಹಾಕಿದ ಅವರು, ಮುಂದೆಯೂ ಗ್ರಾಮ ಪಂಚಾಯಿತಿಗಳೇ ಈ ಯೋಜನೆಯ ಕೇಂದ್ರ ಬಿಂದು ಆಗಿರಲಿವೆ. ವಿಕಸಿತ ಗ್ರಾಮ ಪಂಚಾಯಿತಿ ಗಳನ್ನು ರೂಪಿಸಲು ಯೋಜನೆ ಸಹಕಾರಿ ಯಾಗಲಿದೆ ಎಂದರು.

ರಾಮ ರಾಜ್ಯದ ಕನಸು ಕಂಡಿದ್ದ ಮಹಾತ್ಮ ಗಾಂಧೀಜಿ ಅವರ ಕನಸು ಸಾಕಾರಗೊಳಿಸುವುದಕ್ಕಾಗಿ ನರೇಗಾ ಯೋಜನೆಯಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದೆ. ಗಾಂಧಿ ಹೆಸರನ್ನು ತೆಗೆದ ಮಾತ್ರಕ್ಕೆ ಅಗೌರವ ಎಂದು ಭಾವಿಸಬಾರದು. ಗಾಂಧಿ ತತ್ವಗಳನ್ನು ಪಾಲಿಸಬೇಕಾಗುತ್ತದೆ. ಗಾಂಧೀಜಿ ರಾಮನ ಸ್ಮರಿಸುತ್ತಿದ್ದರು. ನೀವು ರಾಮನ ಅಸ್ತಿತ್ವವನ್ನು ಪ್ರಶ್ನಿಸಿದಿರಿ. ಅವರು ಪಾರದರ್ಶಕತೆ ಪ್ರತಿಪಾದಿಸಿದ್ದರು. ನೀವು ಭ್ರಷ್ಟಾಚಾರ ಬೆಳೆಸಿದಿರಿ. ಗಾಂಧೀಜಿ ಹೆಸರು ಹೇಳಲು ನೀವು ನೈತಿಕತೆ ಉಳಿಸಿಕೊಂಡಿಲ್ಲ. ಗಾಂಧಿ ಹೆಸರನ್ನು ಕಾಂಗ್ರೆಸ್ಸಿಗರು ಉಳಿಸಿಕೊಂಡಿದ್ದಾರೆ ಹೊರತು ಅವರ ತತ್ವಗಳನ್ನಲ್ಲ. ಗಾಂಧೀಜಿ ಬದುಕಿದ್ದರೆ ಕಾಂಗ್ರೆಸ್ ವಿರುದ್ಧ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು ಇಲ್ಲವೇ ಸಲ್ಲೇಖನ ವ್ರತ ಕೈಗೊಳ್ಳುತ್ತಿದ್ದರೆಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ನರೇಗಾ ಕಾರ್ಯವಿಧಾನ ಪರಿಶೀಲಿಸಿದಾಗ ಹಣದ ದುರುಪಯೋಗ, ನಕಲಿ ಜಾಬ್ ಕಾರ್ಡ್ ದೊಡ್ಡ ಪ್ರಮಾಣದಲ್ಲಿ ಕಂಡು ಬಂದಿದೆ. ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಎಐ ತಂತ್ರಜ್ಞಾನ ಬಳಕೆ, ಜಿಪಿಎಸ್ ಟ್ರ್ಯಾಕಿಂಗ್ ಮತ್ತು ನೈಜ ಸಮಯದ ಡ್ಯಾಶ್ ಬೋರ್ಡ್ ಗಳನ್ನು ಪಾರದರ್ಶಕತೆ ತರಲಾಗಿದೆ. ಕೃಷಿ ವಲಯಕ್ಕೆ ವಿಶೇಷ ಪ್ರಾತಿನಿಧ್ಯ ನೀಡಲಾಗಿದೆ. ಗ್ರಾಮೀಣ ಉದ್ಯೋಗ ನೀತಿಯನ್ನು ವಿಕಸಿತ ಭಾರತ ಮಾರ್ಗಸೂಚಿಯೊಂದಿಗೆ ಜೋಡಿಸಲಾಗುವುದೆಂದು ತಿಳಿಸಿದರು.





**ಲೋಕಸಭೆ ಹಾಗು ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಯಾಗಿದೆ. ಪಕ್ಷದ ನಾಯಕರು ಹೇಳಿಕೆ ನೀಡುವ ಸಂದರ್ಭದಲ್ಲಿ ಸ್ವಾಭಾವಿಕವಾಗಿ ವಿಭಿನ್ನ ಹೇಳಿಕೆಗಳನ್ನು ನೀಡುತ್ತಾರೆ. ಅದೇ ರೀತಿ ದೇವೇಗೌಡರು ಕೂಡ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೈತ್ರಿ ಇರುವುದಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಎರಡು ಪಕ್ಷದ ನಾಯಕರು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.**
**-ಸಿ.ಟಿ.ರವಿ, ಮಾಜಿ ಸಚಿವ**

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮುಖಂಡರಾದ ಗಿರೀಶ್, ಚಂದ್ರು ಹಾಜರಿದ್ದರು.

# ನಿವೇಶನ ಮಾಲೀಕತ್ವ: ಯಶ್ ತಾಯಿ- ಜಿಪಿಎ ಹೋಲ್ಡರ್ ಜಟಾಪಟಿ

## ಪೊಲೀಸ್ ಠಾಣೆಯಲ್ಲಿ ಇಬ್ಬರ ವಿಚಾರಣೆ: ದೂರು-ಪ್ರತಿದೂರು

• ಪ್ರಜೋದಯ ವರದಿ

**ಹಾಸನ:** ನಗರದ ವಿದ್ಯಾನಗರ ಬಡಾವಣೆಯಲ್ಲಿರುವ ನಿವೇಶನದ ಮಾಲೀಕತ್ವ ವಿಚಾರವಾಗಿ ಚಿತ್ರನಟ ಯಶ್ ಅವರ ತಾಯಿ ಪುಷ್ಪ ಹಾಗು ಜಿಪಿಎ ಹೋಲ್ಡರ್ ಡಿ.ಹೆಚ್.ದೇವರಾಜ್ ನಡುವಿನ ವಿವಾದ ತೀವ್ರ ಸ್ವರೂಪ ಪಡೆದಿದ್ದು, ಶನಿವಾರ ಬಡಾವಣೆ ಠಾಣೆಯಲ್ಲಿ ದೂರು-ಪ್ರತಿದೂರು ಸಲ್ಲಿಸಿದರು.

ನಿವೇಶನ ನಮ್ಮದೇ ಎಂಬುದಕ್ಕೆ ದಾಖಲೆಗಳಿವೆ. ನ್ಯಾಯಾಲಯ ನೀಡುವ ತೀರ್ಪಿಗೆ ತಲೆ ಬಾಗುತ್ತೇವೆಂದು ಇಬ್ಬರೂ ಹೇಳಿರುವುದರಿಂದ ವಿವಾದ ಇದೀಗ ಕೋರ್ಟ್ ಮೆಟ್ಟಿಲೇರಿದೆ. ತಮ್ಮ ಅನುಪಸ್ಥಿತಿಯಲ್ಲಿ ನಿವೇಶನಕ್ಕೆ ಅಕ್ರಮವಾಗಿ ಪ್ರವೇಶಿಸಿ ಕಾಂಪೌಂಡ್ ಕೆಡವಲಾಗಿದೆ ಎಂದು ಪುಷ್ಪ ಆರೋಪಿಸಿದರು.

ನನ್ನ ಜಾಗದಲ್ಲಿ ಅನುಮತಿ ಇಲ್ಲದೆ ಕಾಂಪೌಂಡ್ ಹೇಗೆ ಕೆಡವಿದರು ಎಂದು ಪೊಲೀಸರ ಮುಂದೆ ಆಕ್ರೋಶ ವ್ಯಕ್ತಪಡಿಸಿದ ಅವರು, ಕುಟುಂಬದ ಭದ್ರತೆಗೂ ಆತಂಕವಿದೆ ಎಂದು ಹೇಳಿದರು.



ಪುಷ್ಪ ಅವರ ಸಂಬಂಧಿ ದುರ್ಗಾಪ್ರಸಾದ್ ಹಾಗು ಸತ್ಯವಂಗಲ ಪಿಡಿಓ ಆಗಿದ್ದ ನಟರಾಜ್ ಇತರರು ನನ್ನ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ದು, ಕೊಲೆ ಬೆದರಿಕೆ ಹಾಕಿದ್ದಾರೆಂದು ದೇವರಾಜ್ ಪ್ರತಿದೂರು ನೀಡಿದರು.

ಇಬ್ಬರ ದೂರು ಸ್ವೀಕರಿಸಿರುವ ಬಡಾವಣೆ ಪೊಲೀಸರು ಕಾನೂನು ಪ್ರಕಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ.

ಪುಷ್ಪ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಮೋಸ ಹೋಗಿದ್ದರೆ ಆಸ್ತಿ ತೆಗೆದು ಕೊಳ್ಳಲಿ, ನಮಗೆ ವಿರೋಧವಿಲ್ಲ. ಆದರೆ, ಮನೆಯಲ್ಲಿ ಜನರಿದ್ದಾರೆ. ರಾತ್ರಿ ವೇಳೆ ಗಲಾಟೆ ಮಾಡುತ್ತಿರುವುದು ಎಷ್ಟು ಸರಿ, ಎಲ್ಲಾ ದಾಖಲೆಗಳನ್ನು ಕೋರ್ಟ್‌ಗೆ ನೀಡಲಾಗುವುದೆಂದರು.

**ನಿವೇಶನವನ್ನು ಆರು ವರ್ಷಗಳ ಹಿಂದೆ ಸೂಕ್ತ ದಾಖಲೆ ಪರಿಶೀಲಿಸಿ ಖರೀದಿಸಿದ್ದೇನೆ. ಮಹಾನಗರಪಾಲಿಕೆಯಲ್ಲಿ ಇ-ಸ್ವತ್ತು ನೋಂದಣಿ ಆಗಿದ್ದು, ತೆರಿಗೆ ಕೂಡ ಪಾವತಿಸಿದ್ದೇವೆ. ಈ ಹಿಂದಿನ ಜಮೀನು ಮಾಲೀಕರು ತಮ್ಮ ಮಗನ ವಿದೇಶಿ ಶಿಕ್ಷಣಕ್ಕಾಗಿ ನಿವೇಶನ ಮಾರಲು ಮನವಿ ಮಾಡಿದ ಹಿನ್ನಲೆ ಯಶ್‌ಗೆ ಹೇಳಿ ಖರೀದಿ ಮಾಡಿದ್ದೇನೆ.**
**-ಪುಷ್ಪ, ನಟ ಯಶ್ ತಾಯಿ**

ದೇವರಾಜ್ ಮಾತನಾಡಿ, ನ್ಯಾಯಾಲಯದ ಆದೇಶದಂತೆ ನಮ್ಮ ಖಾಲಿ ಜಾಗಕ್ಕೆ ಅಕ್ರಮವಾಗಿ ನಿರ್ಮಿಸಿದ್ದ ಕಾಂಪೌಂಡ್ ತೆರವು ಗೊಳಿಸಿದ್ದೇನೆ. ಕೋರ್ಟ್ ಆದೇಶವನ್ನು ಉಲ್ಲಂಘಿಸಿ ಜಾಗದಲ್ಲಿ ಓಡಾಡುತ್ತಿದ್ದಾರೆ. ನಾವು ಯಾವುದೇ ಹಿಂಸೆ ಮಾಡಿಲ್ಲ. ನ್ಯಾಯಾಲಯಕ್ಕೆ ದಾಖಲೆ ನೀಡಿದ್ದೇವೆ ಎಂದರು.

# ಎ.ಟಿ.ಆರ್. ಬದುಕು ಗ್ರಂಥ ರೂಪದಲ್ಲಿ ದಾಖಲಾಗಬೇಕು

• ಪ್ರಜೋದಯ ವರದಿ

**ಅರಕಲಗೂಡು:** ರಾಜಕೀಯ ಕ್ಷೇತ್ರದಲ್ಲಿ ಪರಿಶುದ್ಧ ಜೀವನ ನಡೆಸಿರುವ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರ ಕುರಿತ ಅಭಿನಂದನಾ ಗ್ರಂಥ ಪ್ರಸ್ತುತ ಸಮಾಜಕ್ಕೆ ಅತ್ಯಗತ್ಯವಾಗಿದೆ ಎಂದು ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಅವರು ತಿಳಿಸಿದರು.

ಮೈಸೂರಿನ ಎ.ಟಿ.ರಾಮಸ್ವಾಮಿ ಅಭಿನಂದನಾ ಗ್ರಂಥ ಸಮಿತಿಯಿಂದ ಶನಿವಾರ ತಾಲ್ಲೂಕಿನ ಅರಸೀಕಟ್ಟೆ ಅಮ್ಮ ದೇವಾಲಯ ಆವರಣದಲ್ಲಿ ಹಮ್ಮಿ ಕೊಂಡಿದ್ದ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿ, ಕಳೆದ ನಾಲ್ಕು ದಶಕ ಗಳಿಂದಲೂ ರಾಜಕೀಯ ಕ್ಷೇತ್ರದಲ್ಲಿ ಕಪ್ಪುಚುಕ್ಕೆ ಇಲ್ಲದೆ ನೇರ ನಡೆ ನುಡಿ ಹಾಗು ಸಜ್ಜನಿಕೆಯಿಂದ ಜನಮನ ಗೆದ್ದ ಅಪರೂಪದ ರಾಜಕಾರಣಿ ಎ.ಟಿ.ರಾಮಸ್ವಾಮಿ ಎಂದರು.

ಅವರ ಸಾಧನೆಗಳನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವ ಉದ್ದೇಶದಿಂದ ಅಭಿನಂದನಾ ಗ್ರಂಥ ಹೊರತರಲು ನಿರ್ಧರಿಸಲಾಗಿದೆ. ರಾಮಸ್ವಾಮಿಯವರ ಬಗ್ಗೆ ಕಂಡಿರುವ, ಕೇಳಿರುವ ಪ್ರಮುಖ ಅಂಶಗಳನ್ನು ಬರೆವಣಿಗೆ ಮೂಲಕ ನೀಡಿದರೇ ಅದು ಅವರ ಕುರಿತಾದ ಗ್ರಂಥಕ್ಕೆ ನೆರವಾಗುತ್ತದೆಂದರು.



ನಿವೃತ್ತ ಕುಲಸಚಿವ ಡಾ.ಎ. ರಂಗಸ್ವಾಮಿ ಅವರು ಮಾತನಾಡಿ, ರಾಮಸ್ವಾಮಿ ಅವರನ್ನು ದೂರದಿಂದ ನೋಡಿರುವವರಿಂದ ಸಿಗುವ ಪ್ರಶಂಸೆಗಿಂತ ಅವರು ಸೇವೆ ಸಲ್ಲಿಸಿರುವ ಕ್ಷೇತ್ರದ ಜನರಿಂದ ಸಿಗುವ ಮೆಚ್ಚುಗೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅವರ ಕುರಿತಾದ ಅಭಿನಂದನಾ ಗ್ರಂಥ ರಾಜಕೀಯ ಕ್ಷೇತ್ರಕ್ಕೆ ಕಾಲಿಡು ವವರಿಗೆ ಸಂದೇಶವನ್ನು ನೀಡುವಂತಾಗಬೇಕಿದೆ. ಬರವಣಿಗೆ ಗೊತ್ತಿಲ್ಲದವರು ಆಡಿಯೋ ರೆಕಾರ್ಡ್ ಕಳುಹಿಸಿ, ಬರವಣಿಗೆ ಗೊತ್ತಿರುವವರು ಕನಿಷ್ಟ ಎರಡು ಪುಟಗಳನ್ನಾದರೂ ಕಳುಹಿಸಿ ಎಂದು ತಿಳಿಸಿದರು.

ನಿವೃತ್ತ ಕೆಎಎಸ್ ಅಧಿಕಾರಿ ಬಸವರಾಜು, ಡಾ.ಯೋಗೇಂದ್ರ, ಉಪನ್ಯಾಸಕ ಶಶಿಕುಮಾರ್, ವಕೀಲ ಜನಾರ್ಧನ ಗುಪ್ತ, ಎ.ಜಿ. ರಾಮನಾಥ್, ಬೋರೇಗೌಡ, ಹೇಮಂತ್, ಬಸವರಾಜು, ವಿರೂಪಾಕ್ಷ, ವೆಂಕಟೇಶ್, ಮಂಜುನಾಥ್, ಮಾದೇಶ್, ವೆಂಕಟೇಶ್ ಇತರರಿದ್ದರು.

# ವಲಸೆ ಕಾರ್ಮಿಕರ ದಾಖಲೆಗಳ ಪರಿಶೀಲನೆಗೆ ಒಳಪಡಿಸಿ

## ಅಕ್ರಮ ನುಸುಳುಕೋರರನ್ನು ಹೊರದೂಡಿ, ಅಗತ್ಯವಿದ್ದರೆ ವರ್ಕಿಂಗ್ ವೀಸಾ ನೀಡಿ: ಸಿ.ಟಿ.ರವಿ

• ಪ್ರಜೋದಯ ವರದಿ

**ಹಾಸನ:** ಕಾಫಿ ತೋಟಗಳಲ್ಲಿ ಕಾರ್ಮಿಕರ ಸೋಗಿನಲ್ಲಿ ಅಕ್ರಮ ಬಾಂಗ್ಲಾ ವಲಸಿಗರು, ರೋಹಿಂಗ್ಯಾಗಳು ದೊಡ್ಡ ಸಂಖ್ಯೆಯಲ್ಲಿ ನೆಲೆಸಿರುವ ಅನುಮಾನವಿದೆ. ಹಾಗಾಗಿ ಹೊರ ರಾಜ್ಯ ಗಳಿಂದ ಬಂದಿರುವ ಎಲ್ಲರ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಬೇಕೆಂದು ಮಾಜಿ ಸಚಿವ ಸಿ.ಟಿ.ರವಿ ಅವರು ಒತ್ತಾಯಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಕಲಿ ಆಧಾರ್ ಕಾರ್ಡ್ ಪಡೆದು ಬರುವವರನ್ನು ಬೇರೆ ಬೇರೆ ಕಡೆಗಳಲ್ಲಿ ವ್ಯವಸ್ಥಿತವಾಗಿ ವಾಸ್ತವ್ಯಕ್ಕೆ ಅವಕಾಶ ಮಾಡಿರುವ ಒಂದು ಜಾಲವೇ ಕೆಲಸ ಮಾಡುತ್ತಿರುವ ಬಗ್ಗೆ ಅನುಮಾನವಿದೆ. ಈ ಬಗ್ಗೆ ಕೇಂದ್ರ ಸಚಿವರ ಗಮನ ಸೆಳೆದು, ರಾಜ್ಯ ಸರ್ಕಾರದ ಸಹಕಾರದೊಂದಿಗೆ ತಪಾಸಣೆಗೆ ಒಳಪಡಿಸಿ, ಅಕ್ರಮವಾಗಿ ನೆಲೆಸಿದ್ದರೆ ಹೊರ ಹಾಕುವ ಕೆಲಸ ಮಾಡಿ ಎಂದು ತಿಳಿಸಿದ್ದೇವೆ ಎಂದರು.





**ಸಿದ್ದರಾಮಯ್ಯ ಕಾಲದಲ್ಲೇ ಹೊಸ ದಾಖಲೆ: ವ್ಯಂಗ್ಯ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಿನಗಳ ಲೆಕ್ಕದಲ್ಲಿ ಮಾತ್ರ ದೇವರಾಜು ಅರಸು ಅವರ ದಾಖಲೆಯನ್ನು ಮುರಿದಿದ್ದಾರೆ. ಅದೇ ರೀತಿ ಭ್ರಷ್ಟಾಚಾರ, ಅತೀ ಹೆಚ್ಚು ಸಾಲ, ರೈತರ ಆತ್ಮಹತ್ಯೆ, ಅತ್ಯಾಚಾರ, ದರೋಡೆ ಪ್ರಕರಣಗಳೂ ಇವರ ಕಾಲದಲ್ಲೇ ಹೆಚ್ಚು ನಡೆಯುವು ದರೊಂದಿಗೆ ಹೊಸ ದಾಖಲೆ ಬರೆದಿದ್ದಾರೆ. ಬೆಲೆ ಏರಿಕೆ ಅವರ ಕಾಲದಲ್ಲೇ ದಾಖಲೆ ಬರೆದಿದೆ. ಪಹಣಿ, ಆರ್‌ಟಿಸಿ, ಅಡುಗೆ ಎಣ್ಣೆ, ಕುಡಿಯುವ ಎಣ್ಣೆಯ ಬೆಲೆ ಏರಿಸಿರುವುದು ಅವರ ಕಾಲದಲ್ಲೇ ಎಂದು ವ್ಯಂಗ್ಯವಾಡಿದರು.

**ಎತ್ತಿನಹೊಳೆ ಯೋಜನೆ ಹೆಸರಿನಲ್ಲಿ ಸಾವಿರಾರು ಕೋಟಿ ರೂ. ನಷ್ಟ ಮತ್ತು ಲೂಟಿಯಾಗಿದೆ. ಯಾವ ಪ್ರದೇಶಕ್ಕೆ ನೀರು ನೀಡಬೇಕೆಂದು ಈ ಯೋಜನೆ ಪ್ರಾರಂಭವಾಯಿತೋ ಆ ಪ್ರದೇಶಕ್ಕೆ ನೀರು ತಲುಪುವುದು ಅನುಮಾನ. ಎತ್ತಿನಹೊಳೆ ಯೋಜನೆಯಲ್ಲಿ ದುಡ್ಡು ಎತ್ತಿದ್ದೇ ಕೆಲವರಿಗೆ ಲಾಭ.**
**-ಸಿ.ಟಿ.ರವಿ, ಮಾಜಿ ಸಚಿವ**

ಕಾರ್ಮಿಕರ ಅವಶ್ಯಕತೆ ಇದೆ ಎನ್ನುವುದಾದರೆ ವಲಸೆ ನಿಯಮಗಳನ್ನು ರೂಪಿಸಿ, ವರ್ಕಿಂಗ್ ವೀಸಾ ನೀಡಬಹುದು. ನಾವು ಅಮೇರಿಕಾಕ್ಕೆ ಹೋದರೆ ಜೈಲಿಗೆ ಕಳುಹಿಸುತ್ತಾರೆ, ಅಫ್ಘಾನಿಸ್ತಾನದ ಗಡಿ ದಾಟಿದರೆ ಗುಂಡು ಹಾರಿಸಿ ಕೊಲ್ಲುತ್ತಾರೆ. ಭಾರತದಲ್ಲಿ ಏಕೆ ಬಿಪಿಎಲ್, ಆಧಾರ್ ಕಾರ್ಡ್, ವೋಟರ್ ಐಡಿ ನೀಡಿ ಸಂವಿಧಾನ ಬುಡಮೇಲಾಗಲು ಅವಕಾಶ ನೀಡಬೇಕೆಂದು ಪ್ರಶ್ನಿಸಿದ ಅವರು, ಈ ಬಗ್ಗೆ ಸಮಗ್ರವಾಗಿ ಪರಿಶೀಲನೆ ನಡೆಯಬೇಕು. ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸರ್ಕಾರಕ್ಕೆ ವರದಿ ನೀಡಬೇಕೆಂದು ಹೇಳಿದರು.

ತೋಟಗಳನ್ನು ಉಳಿಸಿಕೊಳ್ಳಲು ವಲಸಿಗರನ್ನು ಕರೆತಂದರೆ, ಮುಂದಿನ ದಿನಗಳಲ್ಲಿ ತೋಟ ವನ್ನು ಅವರಿಗೆ ಬಿಟ್ಟು ನಾವು ಓಡಿ ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಈಗಾಗಲೇ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಿವೆ. ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಅಪಾಯ ಎದುರಿಸಬೇಕಾ ಗುತ್ತದೆ. ಅದು ಆಗಬಾರದು ಎಂದರೆ ವಲಸಿಗರನ್ನು ಗುರುತಿಸಿ ಹೊರ ಹಾಕುವ ಕೆಲಸವಾಗ ಬೇಕೆಂದು ತಿಳಿಸಿದರು.

ಅಕ್ರಮ ಬಾಂಗ್ಲಾ ವಲಸಿಗರು ಒಂದು » ನಾಲ್ಕನೇ ಪುಟದಲ್ಲಿ

# ಅರಕಲಗೂಡು ಚಿಕ್ಕ ಕೆರೆಯಲ್ಲಿ ವ್ಯಕ್ತಿ ಶವ ಪತ್ತೆ



• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಮಲ್ಲಿಪಟ್ಟಣ ರಸ್ತೆ ಚಿಕ್ಕ ಕೆರೆಯಲ್ಲಿ ಶನಿವಾರ ವ್ಯಕ್ತಿಯ ಶವ ಪತ್ತೆಯಾಗಿದೆ. ಮೃತ ವ್ಯಕ್ತಿಯನ್ನು ಪಟ್ಟಣದ ಬೆಸ್ತರ ಬೀದಿಯ ದೇವರಾಜು (68) ಎಂದು ಗುರುತಿಸಲಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಶವ ಹೊರ ತೆಗೆದರು. ವ್ಯಕ್ತಿ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜೆಡಿಎಸ್ ವರಿಷ್ಠರು, ಬಿಜೆಪಿ ನಾಯಕರ ತೀರ್ಮಾನಕ್ಕೆ ಬದ್ಧ: ಹೆಚ್.ಡಿ.ರೇವಣ್ಣ

# ಕಾರ್ಯಕರ್ತರ ಹಿತವೇ ಮುಖ್ಯ, ಸ್ವಾರ್ಥಕ್ಕೆ ಸ್ಥಾನವಿಲ್ಲ

• ಪ್ರಜೋದಯ ವರದಿ

**ಅರಸೀಕೆರೆ:** ಪಕ್ಷದ ಕಾರ್ಯಕರ್ತರ ಹಿತವೇ ಮುಖ್ಯ, ಸ್ವಾರ್ಥಕ್ಕೆ ಇಲ್ಲಿ ಸ್ಥಾನವಿಲ್ಲ. ದೇವೇಗೌಡರು ಬದುಕಿರುವಾಗಲೇ ಈ ಜಿಲ್ಲೆಯನ್ನು ರಾಜ್ಯದಲ್ಲೇ ಉನ್ನತ ಸ್ಥಾನಕ್ಕೆ ಕೊಂಡೊಯ್ಯಬೇಕು ಎಂಬುದೇ ನನ್ನ ಉದ್ದೇಶ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ವಿಧಾನಸಭೆ ಚುನಾವ ಣೆಯಲ್ಲಿ ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ವಿಚಾರದಲ್ಲಿ ನಮ್ಮ ನಾಯಕರು, ಮಿತ್ರಪಕ್ಷ ಬಿಜೆಪಿ ಹಾಗು ಕಾರ್ಯಕರ್ತರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧನಾಗಿರುವೆ. ಜಿಲ್ಲೆಯಲ್ಲಿ ಕಳೆದ ಎರಡೂವರೆ ವರ್ಷಗಳಿಂದ ನಡೆಯುತ್ತಿರುವ ದೌರ್ಜನ್ಯವನ್ನು ತಡೆಯಲು ಹಾಗೂ ಜನರ ಹಿತದೃಷ್ಟಿಯಿಂದ ಪಕ್ಷ ಏನು ತೀರ್ಮಾನ ಮಾಡುತ್ತೋ ಅದಕ್ಕೆ ನಾನು ಬದ್ಧನಾಗಿರುವೆ ಎಂದರು.

ನಮ್ಮ ರಾಷ್ಟ್ರೀಯ ಅಧ್ಯಕ್ಷರಾದ ದೇವೇಗೌಡರು, ಕುಮಾರಸ್ವಾಮಿ ಹಾಗೂ ಇಲ್ಲಿನ ಸ್ಥಳೀಯ ಬಿಜೆಪಿ ನಾಯಕರು ತೆಗೆದುಕೊಳ್ಳುವ ತೀರ್ಮಾನದಂತೆ ನಾನು ನಡೆದುಕೊಳ್ಳುವೆ. ಪಕ್ಷ ಹಾಗು ಕಾರ್ಯಕರ್ತರಿಗೆ ನಾನು ಸದಾ ನಿಷ್ಠನಾಗಿರುವೆ. ನಮ್ಮ ಕಾರ್ಯಕರ್ತರನ್ನು ಸದೃಢವಾಗಿ ದೇವೇಗೌಡರು ಕಾಪಾಡಿಕೊಂಡು ಬಂದಿದ್ದಾರೆ. ಅದನ್ನು ನಾವು ಮುಂದುವರೆಸಿಕೊಂಡು ಹೋಗಬೇಕಾಗಿದೆ.



ದೇವೇಗೌಡರು ಹಾಗು ಕುಮಾರಸ್ವಾಮಿ ಅವರು ಈ ಜಿಲ್ಲೆಗೆ ಅವರದೇ ಆದ ಕೊಡುಗೆ ನೀಡಿದ್ದಾರೆ. ಹಾಗಾಗಿ ನನ್ನ ಮುಂದಿನ ಸ್ಪರ್ಧೆ ಕುರಿತಂತೆ ಇವರ ತೀರ್ಮಾನವೇ ಅಂತಿಮ ಎಂದು ಸ್ಪಷ್ಟಪಡಿಸಿದರು.

ನಾನು ಹೊಳೆನರಸೀಪುರ ಕ್ಷೇತ್ರವನ್ನು ಮರೆಯಲು ಸಾಧ್ಯವಿಲ್ಲ. ದೇವೇಗೌಡರು, ನಾನು ಹಾಗು ಪ್ರಜ್ವಲ್‌ಗೆ ಅಲ್ಲಿನ ಜನರು ಆಶೀರ್ವಾದ ನೀಡಿದ್ದಾರೆ. ನಾವು ಮಾತನಾಡಿದರೆ ಕೆಲಸ ಮಾಡಲು ಬಿಡಲಿಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ಕಳೆದ ಎರಡೂವರೆ ವರ್ಷಗಳಿಂದ ಏನನ್ನೂ ಮಾತನಾಡಿಲ್ಲ. ಈ ಸರ್ಕಾರದ ಅವಧಿಯಲ್ಲಿ ಜಿಲ್ಲೆಗೆ ನಡೆದ ಅನ್ಯಾಯಗಳನ್ನೆಲ್ಲ ಜ.24ರ ಸಭೆಯಲ್ಲಿ ಜಿಲ್ಲೆಯ ಜನರ ಮುಂದೆ ಸವಿವರವಾಗಿ ಇಡಲಾಗುವುದೆಂದು ಹೇಳಿದರು.

ಕಾಂಗ್ರೆಸ್‌ನವರು ಹಾಸನದಲ್ಲಿ ಎರಡು ಬೃಹತ್ ಸಮಾವೇಶಗಳನ್ನು ನಡೆಸಿದರು. ಹಾಸನಕ್ಕೆ ಅವರು ಏನು ಕೊಡುಗೆ ನೀಡಿದರು ಏನು » ನಾಲ್ಕನೇ ಪುಟದಲ್ಲಿ

# ನಾಯಿಗಳನ್ನು ಬೆನ್ನಟ್ಟಿದ ಕಾಡಾನೆ

• ಪ್ರಜೋದಯ ವರದಿ

**ಬೇಲೂರು:** ಮನೆ ಬಳಿಗೆ ಬಂದ ಕಾಡಾನೆಯನ್ನು ಸಾಕು ನಾಯಿಗಳು ಬೆನ್ನಟ್ಟಿದ್ದರಿಂದ ರೊಚ್ಚಿಗೆದ್ದ ಕಾಡಾನೆ ಹಿಮ್ಮೆಟ್ಟಿಸುತ್ತ ಮನೆಯಂಗಳಕ್ಕೆ ಬಂದಿದೆ. ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ ವ್ಯಕ್ತಿಯೊಬ್ಬ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾದ ಘಟನೆ ತಾಲ್ಲೂಕಿನ ಬಿಕ್ಕೋಡು ಸಮೀಪ ನಡೆದಿದೆ.

ಶನಿವಾರ ಮುಂಜಾನೆ ಕಾಡಾನೆಯೊಂದು ಮನೆಯ ಹತ್ತಿರ ಬರುತ್ತಿದ್ದಂತೆ ಅದನ್ನು ಕಂಡ ನಾಯಿ ಬೊಗಳುತ್ತಾ ಹಿಂಬಾಲಿಸಿವೆ. ಅದರಿಂದ ಸಿಟ್ಟಿಗೆದ್ದ ಕಾಡಾನೆ ನಾಯಿಗಳ ಮೇಲೆ ದಾಳಿ ನಡೆಸಲು ಧಾವಿಸಿ ಬಂದಿದೆ. ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ ವ್ಯಕ್ತಿ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ತಪ್ಪಿಸಿಕೊಳ್ಳಲು ಮನೆಯೊಳಗೆ ಓಡಿ ಹೋಗಿದ್ದಾನೆ.

ಬಿಕ್ಕೋಡು ಭಾಗಗಳಲ್ಲಿ ಕಾಡಾನೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಕಾಡಾನೆ-ಮಾನವ ಸಂಘರ್ಷವನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಕೆಲವೊಮ್ಮೆ ಕಾಡಾನೆಗಳು ಮನುಷ್ಯರನ್ನು ಕಂಡು ದಾಳಿಗೆ ಮುಂದಾಗುತ್ತವೆ. ಆದ್ದರಿಂದ ಅವುಗಳೊಂದಿಗೆ ಚೆಲ್ಲಾಟವಾಡಬಾರದೆಂಬ ಅಂಶವನ್ನು ಮನನ ಮಾಡಿಕೊಂಡು, ಸಾರ್ವಜನಿಕರು ಕಾಡಾನೆಗಳ ವಿಡಿಯೋ ಹಾಗು ಫೋಟೋಗಳನ್ನು ಸೆರೆ ಹಿಡಿಯುವ ದುಸ್ಸಾಹಸಕ್ಕೆ ಕೈ ಹಾಕ ಬಾರದೆಂದು ಅರಣ್ಯ ಇಲಾಖೆ ಇತ್ತೀಚೆಗೆ ಎಚ್ಚರಿಕೆ ನೀಡಿತ್ತು. ಆದರೂ ಕಾಡಾನೆ ವಿಡಿಯೋ, ಫೋಟೋ ತೆಗೆಯಲು ಹೋಗಿ ಜೀವಕ್ಕೆ ಆಪತ್ತು ತಂದುಕೊಳ್ಳುತ್ತಿದ್ದಾರೆ.



# ಪಾಳ್ಯ ನಾಡಕಚೇರಿ ಕಟ್ಟಡ ನಿರ್ಮಾಣಕ್ಕೆ ಕ್ರಮ ಅಗತ್ಯ

## ಸರ್ಕಾರಕ್ಕೆ ಶಾಸಕ ಸಿಮೆಂಟ್ ಮಂಜು ಒತ್ತಾಯ

• ಪ್ರಜೋದಯ ವರದಿ

**ಆಲೂರು:** ಸಾರ್ವಜನಿಕರ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವಂತೆ ಹಾಗು ಸಿಬ್ಬಂದಿಗೆ ಸುಸಜ್ಜಿತ ವಾತಾವರಣ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಪಾಳ್ಯ ನಾಡಕಚೇರಿಗೆ ನೂತನ ಕಟ್ಟಡ ನಿರ್ಮಾಣಕ್ಕೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಒತ್ತಾಯಿಸಿದರು.

ತಾಲ್ಲೂಕಿನ ಪಾಳ್ಯ ಹೋಬಳಿ ಕೇಂದ್ರದಲ್ಲಿರುವ ಶಿಥಿಲಾವಸ್ಥೆಯ ನಾಡಕಚೇರಿಗೆ ಭೇಟಿ ನೀಡಿ ಕಚೇರಿ ಕಟ್ಟಡದ ಸ್ಥಿತಿಗತಿಯನ್ನು ಪರಿಶೀಲಿಸಿದ ಅವರು, ಸುಮಾರು 80 ವರ್ಷಗಳ ಹಿಂದೆ ಹೆಂಚಿನ ಮನೆಯಿಂದ ನಿರ್ಮಿಸಲಾದ ಪಾಳ್ಯ ನಾಡಕಚೇರಿ ಕಟ್ಟಡವು ಈಗ ಸಂಪೂರ್ಣ ದುಸ್ಥಿತಿ ಯಲ್ಲಿದ್ದು, ಶಿಥಿಲಾವಸ್ಥೆಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ನಾಡಕಚೇರಿ ವ್ಯಾಪ್ತಿಯಲ್ಲಿ ಸುಮಾರು 82 ಗ್ರಾಮಗಳು ಒಳಗೊಂಡಿದ್ದು, ಕಿರಿದಾದ ಕಟ್ಟಡದ ಕಾರಣ ಸಾರ್ವಜನಿಕರು ಒಳಪ್ರವೇಶಿಸುವುದಕ್ಕೂ ತೀವ್ರ ಅಸೌಕರ್ಯ ಎದುರಿಸುತ್ತಿದ್ದಾರೆಂದು ಹೇಳಿದರು.





ಹಳೆಯದಾದ ಕಟ್ಟಡದ ಹೆಂಚುಗಳು ಹಾಗೂ ಮರದ ತೀರುಗಳು ಯಾವಾಗ ಬೇಕಾದರೂ ಮುರಿದು ಬೀಳುವ ಸಾಧ್ಯತೆ ಇದ್ದು, ನಾಡಕಚೇರಿಗೆ ಕೆಲಸಕ್ಕಾಗಿ ಆಗಮಿಸುವ ಸಾರ್ವಜನಿಕರ ಸುರಕ್ಷತೆಗೆ ಅಪಾಯ ಉಂಟಾಗುವ ಆತಂಕವಿದೆ. ಮುಂದಿನ ಮಳೆಗಾಲದಲ್ಲಿ ಮಳೆ ನೀರಿನ ಸೋರಿಕೆಯಿಂದ ಸಿಬ್ಬಂದಿಗಳು ಕೆಲಸ ನಿರ್ವಹಿಸಲು ತೀವ್ರ ತೊಂದರೆ ಎದುರಿಸಬೇಕಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು. » ನಾಲ್ಕನೇ ಪುಟದಲ್ಲಿ

## ಸಾಣೇನಹಳ್ಳಿ ಸ್ವಾಮೀಜಿ ಪ್ರತಿಪಾದನೆ | ಮಾಡಾಳು ಗ್ರಾಮದಲ್ಲಿ 26ನೇ ಅರಿವಿನ ಜಾಗೃತಿ

# ಲಿಂಗಾಯತ ಎಂದೆಂದಿಗೂ ಪ್ರತ್ಯೇಕ ಧರ್ಮ

• ಪ್ರಜೋದಯ ವರದಿ

**ಮಾಡಾಳು:** ಸರ್ಕಾರಗಳು ಒಪ್ಪಲಿ ಅಥವಾ ಒಪ್ಪದೇ ಇರಲಿ ಲಿಂಗಾಯತ ಯಾವತ್ತಿಗೂ ಪ್ರತ್ಯೇಕ ಧರ್ಮವೆಂದು ತರಳಬಾಳು ಸಾಣೇಹಳ್ಳಿ ಮಠದ ಪೀಠಾಧ್ಯಕ್ಷ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಪ್ರತಿಪಾದಿಸಿದರು.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ನಿರಂಜನ ಪೀಠದ ಲಿಂಗೈಕ್ಯ ಶ್ರೀ ಚಂದ್ರಶೇಖರ ಸ್ವಾಮೀಜಿ ಅವರ 19ನೇ ಪುಣ್ಯ ಸ್ಮರಣೋತ್ಸವ ಮತ್ತು 26ನೇ ಅರಿವಿನ ಜಾಗೃತಿ ಹಾಗು ನೂತನ ವಿದ್ಯಾರ್ಥಿ ನಿಲಯದ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಶ್ರೀಗಳು ಸಮಾಜವನ್ನು ಜಾಗೃತಿಗೊಳಿಸಬೇಕಾದ ಮಠಗಳೇ ಸಮಾಜಕ್ಕೆ ತಪ್ಪು ದಾರಿ ತೋರುತ್ತಿರುವುದು ಬೇಸರದ ಸಂಗತಿ ಎಂದರು.

ನಿಷ್ಠೆ ಮತ್ತು ನಿಷ್ಠುರತೆ ಪ್ರಸ್ತುತ ಸಮಾಜದಲ್ಲಿ ಮರೆಯಾಗುತ್ತಿದೆ. ಬೆಳಕು ನೀಡುವುದಕ್ಕಿಂತ ಬೆಂಕಿ ಹಚ್ಚುವರ ಸಂಖ್ಯೆ ಹೆಚ್ಚಾಗುತ್ತಿದೆ. ಏಕನಿಷ್ಠೆಯೇ ಲಿಂಗಾಯತ ಧರ್ಮದ ಮೂಲತತ್ವ ಎಂಬುದನ್ನ ಮರೆಯಬಾರದು. ಗಣಾಚಾರದಿಂದ ಮಾತ್ರ ಸ್ಪಷ್ಟತೆ ದೊರೆಯಲಿದೆಯೆಂದು ಲಿಂಗಾಯತ ಧರ್ಮದ ಅನುಯಾಯಿಗಳಿಗೆ ಕರೆ ನೀಡಿದರು.



ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಮಾತನಾಡಿ, ರಾಜಕಾರಣಿಗಳು ಹಾಗು ಸರ್ಕಾರ ದಾರಿ ತಪ್ಪಿದ ಸಂದರ್ಭದಲ್ಲಿ ಮಠಾಧೀಶರು ಎಚ್ಚರಿಸುವ ಕೆಲಸ ಮಾಡಬೇಕಿದೆ. ಪ್ರಸ್ತುತ ಸನ್ನಿವೇಶದಲ್ಲಿ ಮಠಾಧೀಶರ ಮಾರ್ಗದರ್ಶನ ಅವಶ್ಯಕತೆ ಹೆಚ್ಚಿದೆಯೆಂದರು.

ನಾಡಿನ ಮಠ ಮಂದಿರಗಳು ಶಿಕ್ಷಣ ಕ್ಷೇತ್ರಕ್ಕೆ ಒತ್ತು ನೀಡಿದ್ದರಿಂದ ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತ ಮಕ್ಕಳಿಗೆ ಸಹಕಾರಿಯಾಗಿದೆ. ಶೈಕ್ಷಣಿಕವಾಗಿ ರಾಜ್ಯ ಮುಂದಿದೆ ಅಂದರೆ ಅದಕ್ಕೆ ರಾಜ್ಯದ ವಿವಿಧ ಮಠಾಧೀಶರ ಕೊಡುಗೆ ಅಪಾರವಾಗಿದೆಯೆಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಲಿಂಗೈಕ್ಯ ಚಂದ್ರಶೇಖರ ಸ್ವಾಮೀಜಿ ಅವರು ಪವಾಡ ಪುರುಷರಾಗಿದ್ದರು. ಅರಸೀಕೆರೆ ವಿಧಾನಸಭಾ ಕ್ಷೇತ್ರದ » ನಾಲ್ಕನೇ ಪುಟದಲ್ಲಿ

**ರೇವಣ್ಣ-ಕೆ.ಎಂ.ಶಿ. ಮುನಿಸು**

ಒಂದು ಕಾಲದ ಆಪ್ತರಾಗಿದ್ದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗು ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾಡಾಳು ಗ್ರಾಮದಲ್ಲಿ ಒಂದೇ ವೇದಿಕೆ ಹಂಚಿಕೊಂಡಿದ್ದರೂ ಪರಸ್ಪರ ಮಾತನಾಡದೆ, ತಪ್ಪಿಯೂ ಒಬ್ಬರಿಗೊಬ್ಬರು ದೃಷ್ಟಿ ತಾಗದಂತೆ ಇದ್ದರು. ಮೊದಲು ಮಾತನಾಡಿದ ರೇವಣ್ಣ, ಶಿವಲಿಂಗೇಗೌಡ ಅವರ ಹೆಸರು ಹೇಳಲಿಲ್ಲ. ಉಳಿದವರ ಹೆಸರು ಹೇಳಿ ಹಾಗೆಯೇ ಭಾಷಣ ಮುಗಿಸಿದರು.

ನಂತರ ಶಿವಲಿಂಗೇಗೌಡ ಅವರು ಮಾತನಾಡಲು ಆರಂಭಿಸುತ್ತಿದ್ದಂತೆಯೇ ರೇವಣ್ಣ ಅವರು ವೇದಿಕೆಯಿಂದ ನಿರ್ಗಮಿಸಿದರು. ಅದರಿಂದ ಅಸಮಾಧಾನಗೊಂಡ ಶಿವಲಿಂಗೇಗೌಡ ಅವರು, ಇದು ನನಗೆ, ಸಮಸ್ತ ಗುರುಗಳಿಗೆ ಮಾತ್ರವಲ್ಲ, ಇಡೀ ತಾಲ್ಲೂಕು, ಕಣಕಟ್ಟೆ ಹೋಬಳಿ ಜನರಿಗೆ ಮಾಡಿದ ಅವಮಾನವೆಂದರು.

# ಸುವರ್ಣ ಇತಿಹಾಸ ಬರೆದ ಬಂಗಾರದ ಮನುಷ್ಯ






ಪತ್ತೇದಾರಿ ಕಾದಂಬರಿಗಳಿಂದಾಗಿ ಪ್ರಸಿದ್ಧರಾಗಿದ್ದ ಟಿ.ಕೆ.ರಾಮರಾವ್ ಅವರ ಇದೇ ಹೆಸರಿನ ಸಾಮಾಜಿಕ ಕಾದಂಬರಿಯನ್ನು ಆಧರಿಸಿ ರೂಪುಗೊಂಡ ಚಿತ್ರವೇ ಬಂಗಾರದ ಮನುಷ್ಯ. ಸಿದ್ದಲಿಂಗಯ್ಯನವರ ನಿರ್ದೇಶನ, ಜಿ.ಕೆ.ವೆಂಕಟೇಶ್ ಅವರ ಸಂಗೀತ, ಹುಣಸೂರು ಕೃಷ್ಣಮೂರ್ತಿ, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ, ಚಿ.ಉದಯಶಂಕರ್ ಅವರ ಅನುಪಮ ಗೀತೆಗಳನ್ನು ಒಳಗೊಂಡಿದ್ದ ಈ ಚಿತ್ರದ ಮುಖ್ಯ ಪಾತ್ರಧಾರಿಗಳು ಡಾ.ರಾಜ್‌ಕುಮಾರ್, ಭಾರತಿ, ಟಿ.ಎನ್.ಬಾಲಕೃಷ್ಣ, ದ್ವಾರಕೀಶ್, ಆದವಾನಿ ಲಕ್ಷ್ಮೀದೇವಿ, ವಜ್ರಮುನಿ ಮುಂತಾದವರು.

ಮಾನವ ಬದುಕಿನ ವಿವಿಧ ಹಂತಗಳನ್ನು ಸಾರಿ ಹೇಳುವ ನಗುನಗುತಾ ನಲಿ ನಲಿ ಏನೇ ಆಗಲಿ ಎಂಬ ಸುಂದರ ಗೀತೆಯೊಂದಿಗೆ ಶುರುವಾಗುವ ಚಿತ್ರ, ಹಾಡು ಮುಗಿಯುತ್ತಿದ್ದಂತೆ ದುರಂತದ ದೃಶ್ಯಕ್ಕೆ ತೆರೆದುಕೊಳ್ಳುತ್ತದೆ. ಅಲ್ಲಿಯವರೆಗೂ ನಗುನಗುತಾ ನಲಿ ನಲಿ ಎಂದು ನಲಿಯುತ್ತಾ ಹಾಡಿಕೊಂಡು ಬಂದಿದ್ದ ಕಥಾನಾಯಕ ರಾಜೀವ, ತನ್ನ ಅಕ್ಕನ ಮನೆಯ ಆವರಣವನ್ನು ಪ್ರವೇಶಿಸುತ್ತಿದ್ದಂತೆ ಸೂತಕದ ಛಾಯೆ ಮುಖಕ್ಕೆ ರಾಚುತ್ತದೆ.

ಕಾರಣ, ಆತನ ಭಾವ ಅಸು ನೀಗಿರುತ್ತಾರೆ. ಅಕ್ಕನಿಗೆ ಮತ್ತು ಆಕೆಯ ಮನೆಗೆ ಆಸರೆಯಾಗಿದ್ದ ಯಜಮಾನ ಇಲ್ಲವಾಗಿ, ಹಿರಿಯ ಸೋದರನೂ ಹೊಣೆಗಾರಿಕೆಯ ನೊಗದಿಂದ ಕಳಚಿಕೊಳ್ಳುತ್ತಾನೆ. ಓದು ಮುಗಿಸಿಕೊಂಡು ಪಟ್ಟಣದಿಂದ ಬಂದಿದ್ದ ರಾಜೀವ ಅಕ್ಕನ ಕುಟುಂಬಕ್ಕೆ ಆಸರೆಯಾಗಿ ನಿಲ್ಲಲು ಸಂಕಲ್ಪಿಸುತ್ತಾನೆ.

ನಂಬಿದವರನ್ನು ಭೂತಾಯಿ ಕೈಬಿಡುವುದಿಲ್ಲ ಎಂಬ ಗ್ರಹಿಕೆಯನ್ನು ಗಟ್ಟಿಯಾಗಿಸಿಕೊಂಡು, ಇದ್ದ ಕಲ್ಲುಹೊಲದಲ್ಲೇ ಕೃಷಿಗೆ ಇಳಿದು, ಬೆವರು-ರಕ್ತವನ್ನು ಬಸಿದು ದುಡಿಯುತ್ತಾನೆ. ವೈಯಕ್ತಿಕ ಸಂತಸ, ಕೌಟುಂಬಿಕ ಸುಖವನ್ನು ಬದಿಗೊತ್ತಿ, ಅಕ್ಕನ ಮಕ್ಕಳ ಶಿಕ್ಷಣ, ಉದ್ಯೋಗ, ಮದುವೆಗೆ ಅನುವು ಮಾಡಿ ಕೊಡುತ್ತಾನೆ.

ಇಷ್ಟೆಲ್ಲಾ ತ್ಯಾಗ ಮಾಡಿದ ನಂತರವೂ, ಯಾರದೋ ಚಾಡಿಮಾತನ್ನು ಕೇಳಿ ಅಕ್ಕನ ಮಗನೊಬ್ಬ ತನ್ನ ಬಗ್ಗೆ ಇಲ್ಲ ಸಲ್ಲದ ಮಾತಾಡಿ, ನಮ್ಮ ಮನೆಯಲ್ಲಿ ತಿನ್ನೋಕ್ಕೆ ಬಿದ್ದಿರುವವನು ಎಂದು ಅವಹೇಳನದ ಮಾತಾಡಿದಾಗ, ನಿಂತ ನಿಲುವಿಗೇ ಮನೆಯಿಂದಾಚೆ ನಡೆದು ಅನಂತದೆಡೆಗೆ ಹೆಜ್ಜೆ ಹಾಕುತ್ತಾನೆ ಕಥಾನಾಯಕ ರಾಜೀವ. ಕೊನೆಗೆ ಸತ್ಯಸಂಗತಿ ತಿಳಿದು ಮನೆಯವರು ರಾಜೀವನನ್ನು ಹುಡುಕಲು ಮಾಡಿದ ಕಸರತ್ತು ವಿಫಲವಾಗುತ್ತದೆ. ಇದಿಷ್ಟು ಬಂಗಾರದ ಮನುಷ್ಯನ ಸ್ಥೂಲ ಕಥಾವಸ್ತು. ಈ ಕಥೆಗೆ ಹಾಸ್ಯ, ಸುಮಧುರ ಗೀತೆಗಳು, ಸಮಾಜದಲ್ಲಿ ಪರಸ್ಪರರು ಕೂಡಿ ಬಾಳ ಬೇಕಿರುವುದರ ಅನಿವಾರ್ಯತೆ, ಚಕ್ರಬಡ್ಡಿ ಹೇರಿ ಬಡವರ ರಕ್ತ ಹೀರದೆ ಧನಸಹಾಯ ಮಾಡುವ ರಾಸಿ ರೊಕ್ಕದ ಧಣಿ ರಾಚೂಟಪ್ಪ, ಆತನ ಹೊಣೆಗೇಡಿ ಮಗ, ನಂಬಿದವರನ್ನು ಕೃಷಿ ಕೈಬಿಡುವುದಿಲ್ಲ ಎಂಬ ಸಾರ್ವಕಾಲಿಕ ಸತ್ಯ ಮುಂತಾದ ಅಂಶಗಳನ್ನು ಹದವಾಗಿ ಹೆಣೆದು ಒಂದು ಸುಂದರ ದೃಶ್ಯಕಾವ್ಯವಾಗಿಸಿದ್ದಾರೆ ನಿರ್ದೇಶಕ ಸಿದ್ದಲಿಂಗಯ್ಯನವರು.

ಗಂಡನನ್ನು ಕಳೆದುಕೊಂಡು ಕಂಗಾಲಾಗಿರುವ ಅಕ್ಕನಿಗೆ ಧನಸಹಾಯ ಮಾಡಬೇಕೆಂಬ ಆಶಯವನ್ನು ರಾಜೀವ ಅಮ್ಮಾವ್ರ ಗಂಡನಾದ ತನ್ನ ಹಿರಿಯ ಸೋದರನಲ್ಲಿ ಸೂಚ್ಯವಾಗಿ ವ್ಯಕ್ತ ಪಡಿಸುತ್ತಾನೆ. ಆದರೆ ಆತನ ಹೆಂಡತಿ, ನಮಗೆ ಬರುತ್ತಿರೋ ಸಂಬಳ ನಮ್ಮ ಜೀವನಕ್ಕೇ ಸಾಲುತ್ತಿಲ್ಲ, ಮಗಳನ್ನು ಓದಿಸೋಕ್ಕೆ ಅಂತ ನಾವೇ ಅವರಿವರಲ್ಲಿ ಸಾಲ ಮಾಡುವಂತಾಗಿದೆ ಎಂದು ತಾರಮ್ಮಯ್ಯ ಮಾಡುತ್ತಾಳೆ. ಆಗ ರಾಜೀವ, ಅಯ್ಯೋ ಪಾಪ. ನಿಮಗೆ ಬರುತ್ತಿರೋ 900 ರುಪಾಯಿ ಸಂಬಳದಲ್ಲಿ ಬದುಕು ಸಾಗಿಸೋಕೆ ಆಗದೆ ಸಾಲ ಬೇರೆ ಮಾಡ್ತಾ ಇದ್ದೀರೋ?! ಎಂಬರ್ಥದಲ್ಲಿ ವಿಷಾದದ ನಗೆ ಬೀರುತ್ತಾನೆ.

900 ರುಪಾಯಿ ಸಂಬಳದ ಸಂಭಾಷಣೆಯನ್ನು ಇಲ್ಲಿ ಉಲ್ಲೇಖಿಸಲು ಕಾರಣವಿದೆ- ಈ ಚಿತ್ರ ಬಿಡುಗಡೆಯಾಗಿದ್ದು 1972ರ ಮಾರ್ಚ್ 31ರಂದು. ಆಗಿನ 900 ರುಪಾಯಿಗೆ ಪ್ರಸಕ್ತ ಕಾಲಘಟ್ಟದಲ್ಲಿನ ಮೌಲ್ಯವನ್ನು ಸಮೀಕರಿಸಿಕೊಂಡರೆ ಕಥೆಯ ಆಳಕ್ಕೆ ಇಳಿಯಲು ನೆರವಾಗುತ್ತದೆ. ಚಿತ್ರದ ಮಿಕ್ಕ ಎಲ್ಲ ಅಂಶಗಳೂ ಅಂದಿಗೂ ಇಂದಿಗೂ ಅನ್ವಯವಾಗುವ ಸಾರ್ವಕಾಲಿಕ ರಸಘಟ್ಟಿಗಳೇ ಆಗಿವೆ ಎಂಬುದು ನಿರ್ವಿವಾದ.

ಇನ್ನು, ಚಿತ್ರದ ಒಬ್ಬೊಬ್ಬ ಪಾತ್ರಧಾರಿಯ ಪಾತ್ರಪೋಷಣೆ ಮತ್ತು ಅವರಿಂದ ಹೊಮ್ಮಿರುವ ಅಭಿನಯ ಇವೆಯಲ್ಲಾ, ಅದು ಕಳಿತ ರಸಬಾಳೆ ಹಣ್ಣನ್ನು ಜೇನಿನಲ್ಲಿ ಅದ್ದಿ ತೆಗೆದಂತಿದೆ. ಹೀಗಾಗಿ ಬಂಗಾರದ ಮನುಷ್ಯ ನೋಡುಗರೆಲ್ಲರ ಮನವನ್ನು ಆಪ್ತವಾಗಿ ಮುಟ್ಟುತ್ತಾನೆ, ತಟ್ಟುತ್ತಾನೆ.

ಇಷ್ಟಾಗಿಯೂ, ಬರಹಗಾರರು/ವಿಮರ್ಶಕರ ವಲಯದ ಕೆಲವರು ಚಿತ್ರದ ಒಂದಿಷ್ಟು ದೃಶ್ಯಗಳ ಕುರಿತು ಕೊಂಕು ತೆಗೆದಿದ್ದುಂಟು. ಖ್ಯಾತ ಕಾದಂಬರಿಕಾರ ಶ್ರೀಕೃಷ್ಣ ಆಲನಹಳ್ಳಿ ಅವರು, ಬಂಗಾರದ ಮನುಷ್ಯ ಚಿತ್ರದ ಆರಂಭದಲ್ಲಿಯೇ ನಾಯಕನ ಪಾದರಕ್ಷೆಗಳನ್ನು ಕ್ಲೋಸ್-ಅಪ್ ಕೋನದಲ್ಲಿ ತೋರಿಸಲಾಗಿದೆ. ಈ ಮೂಲಕ ಪ್ರೇಕ್ಷಕರಿಗೆ ಅಗೌರವ ತೋರಲಾಗಿದೆ.

ಇದು ವ್ಯಕ್ತಿಪೂಜೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಹೇಳಿಕೊಂಡರೆ, ಮತ್ತೋರ್ವ ಸಾಹಿತಿ ಯು.ಆರ್.ಅನಂತಮೂರ್ತಿಯವರು, ಬಂಗಾರದ ಮನುಷ್ಯ ಚಿತ್ರವು ನೋಡುಗರನ್ನು ಮೋಸಗೊಳಿಸುವಂತಿದೆ. ಕಥಾನಾಯಕ ರಾಜೀವನಂತೆ ಯುವಜನರು ರಾತ್ರೋರಾತ್ರಿ

> ಚಿತ್ರರಸಿಕರು ಇಂಥ ಟೀಕೆ-ಟಿಪ್ಪಣಿಗಳನ್ನು ಕಿವಿಗೆ ಹಾಕಿಕೊಳ್ಳದೆ, ಬಂಗಾರದ ಮನುಷ್ಯ ಬಿಂಬಿಸಿದ ಉತ್ತಮಿಕೆಗಳಿಗೆ ಓಗೊಟ್ಟು ಪ್ರವಾಹದೋಪಾದಿಯಲ್ಲಿ ಚಿತ್ರಮಂದಿರಗಳಿಗೆ ದಾಂಗುಡಿಯಿಟ್ಟರು. ಇದಕ್ಕೆ ಪುರಾವೆ ಎಂಬಂತೆ, ಬೆಂಗಳೂರಿನ ಸ್ಟೇಟ್ಸ್ ಚಿತ್ರಮಂದಿರದಲ್ಲಿ (ಈಗ ಭೂಮಿಕಾ ಎಂದಾಗಿದೆ) ಬಿಡುಗಡೆಯಾದ ಈ ಚಿತ್ರ ಬರೋಬ್ಬರಿ 2 ವರ್ಷಗಳಿಗೂ ಹೆಚ್ಚು ಕಾಲ ಪ್ರದರ್ಶನ ಕಂಡರೆ, ಮೈಸೂರಿನ ಚಾಮುಂಡೇಶ್ವರಿ ಚಿತ್ರಮಂದಿರದಲ್ಲಿ 60 ವಾರಗಳವರೆಗೆ ಓಡಿತು. ಮಾತ್ರವಲ್ಲದೆ, ರಾಜ್ಯದ ವಿವಿಧೆಡೆ 25 ವಾರಗಳ ಪ್ರದರ್ಶನ ಭಾಗ್ಯವನ್ನು ಕಂಡಿತು. 1988ರಲ್ಲಿ ಮರು ಬಿಡುಗಡೆಯಾದಾಗಲೂ 25 ವಾರಗಳ ಪ್ರದರ್ಶನ ಕಂಡ ಹೆಗ್ಗಳಿಕೆ ಬಂಗಾರದ ಮನುಷ್ಯನದ್ದು.

ಶ್ರೀಮಂತರಾಗುತ್ತಾರೆ ಎಂದು ನಂಬುವಂತೆ ಮಾಡಲಾಗಿದೆ ಎಂದಿದ್ದು ಇದಕ್ಕೆ ಸಾಕ್ಷಿ.

ಚಿತ್ರರಸಿಕರು ಇಂಥ ಟೀಕೆ-ಟಿಪ್ಪಣಿಗಳನ್ನು ಕಿವಿಗೆ ಹಾಕಿಕೊಳ್ಳದೆ, ಬಂಗಾರದ ಮನುಷ್ಯ ಬಿಂಬಿಸಿದ ಉತ್ತಮಿಕೆಗಳಿಗೆ ಓಗೊಟ್ಟು ಪ್ರವಾಹದೋಪಾದಿಯಲ್ಲಿ ಚಿತ್ರಮಂದಿರಗಳಿಗೆ ದಾಂಗುಡಿಯಿಟ್ಟರು. ಇದಕ್ಕೆ ಪುರಾವೆ ಎಂಬಂತೆ, ಬೆಂಗಳೂರಿನ ಸ್ಟೇಟ್ಸ್ ಚಿತ್ರಮಂದಿರದಲ್ಲಿ (ಈಗ ಭೂಮಿಕಾ ಎಂದಾಗಿದೆ) ಬಿಡುಗಡೆಯಾದ ಈ ಚಿತ್ರ ಬರೋಬ್ಬರಿ 2 ವರ್ಷಗಳಿಗೂ ಹೆಚ್ಚು ಕಾಲ ಪ್ರದರ್ಶನ ಕಂಡರೆ, ಮೈಸೂರಿನ ಚಾಮುಂಡೇಶ್ವರಿ ಚಿತ್ರಮಂದಿರದಲ್ಲಿ 60 ವಾರಗಳವರೆಗೆ ಓಡಿತು. ಮಾತ್ರವಲ್ಲದೆ, ರಾಜ್ಯದ ವಿವಿಧೆಡೆ 25 ವಾರಗಳ ಪ್ರದರ್ಶನ ಭಾಗ್ಯವನ್ನು ಕಂಡಿತು. 1988ರಲ್ಲಿ ಮರು ಬಿಡುಗಡೆಯಾದಾಗಲೂ 25 ವಾರಗಳ ಪ್ರದರ್ಶನ ಕಂಡ ಹೆಗ್ಗಳಿಕೆ ಬಂಗಾರದ ಮನುಷ್ಯನದ್ದು. ತರುವಾಯದಲ್ಲೊಮ್ಮೆ ಫೋರ್ಬ್ಸ್ ನಿಯತಕಾಲಿಕವು ಈ ಚಿತ್ರದಲ್ಲಿ ಹೊಮ್ಮಿದ ಡಾ.ರಾಜ್ ಕುಮಾರ್ ಅವರ ಅಭಿನಯವನ್ನು ಭಾರತೀಯ ಸಿನಿಮಾದ 25 ಶ್ರೇಷ್ಠ ನಟನಾ ಪ್ರದರ್ಶನಗಳ ಪಟ್ಟಿಯಲ್ಲಿ ಸೇರಿಸಿದ್ದೂ ಉಂಟು.

ನೋಡುಗರನ್ನು ಬಂಗಾರದ ಮನುಷ್ಯ ಪ್ರಭಾವಿಸಿದ ಪರಿ ಹೇಗಿತ್ತು ಎಂದರೆ, ಕೆಲವು ನಗರ-ಕೇಂದ್ರಿತ ಯುವಕರು ತಾವು ನಿರ್ವಹಿಸುತ್ತಿದ್ದ ಉದ್ಯೋಗಗಳನ್ನು ತೊರೆದು, ತಂತಮ್ಮ ಹಳ್ಳಿಗೆ ಹಿಂದಿರುಗಿ ಕೃಷಿಕಾರ್ಯದಲ್ಲಿ ವ್ಯಸ್ತರಾದರು!

ಸಾಮಾಜಿಕ ಒಗ್ಗಟ್ಟು, ಸಹಕಾರಿ ಚಳವಳಿ, ಗ್ರಾಮೀಣಾಭಿವೃದ್ಧಿ, ಕೃಷಿಯಲ್ಲಿ ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕಾಗಿರುವುದರ ಅನಿವಾರ್ಯತೆ, ಪ್ರಾಮಾಣಿಕ ಪ್ರೀತಿ, ಸಮರ್ಪಣಾ ಮನೋಭಾವ ಮುಂತಾದ ಪರಿಕಲ್ಪನೆಗಳು ಈ ಚಿತ್ರದ ವಿವಿಧ ಪಾತ್ರಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಕೆನೆಗಟ್ಟಿವೆ. ಹಳ್ಳಿಗಳಿಂದ ತುಂಬಿರುವ ಮತ್ತು ಕೃಷಿಯೇ ಜೀವನಾಡಿಯಾಗಿರುವ ಭಾರತದಂಥ ದೇಶದಲ್ಲಿ, ರೈತರಿಗೆ ಎದುರಾಗುವ ಸಂಕಷ್ಟಗಳೇನು? ಅವನ್ನು ಹೇಗೆ ಜಯಿಸಿ ಮುಂದೆ ಬರಬಹುದು? ಎಂಬ ಅಂಶಗಳನ್ನು ಅನಕ್ಷರಸ್ಥರಿಗೂ ಮನಮುಟ್ಟುವ ರೀತಿಯಲ್ಲಿ ಬಿಂಬಿಸಿರುವ ಬಂಗಾರದ ಮನುಷ್ಯ ಒಂದು ಸಾರ್ವಕಾಲಿಕ ಶ್ರೇಷ್ಠ ಚಿತ್ರ ಎಂಬುದರಲ್ಲಿ ಅನುಮಾನವಿಲ್ಲ. ದನ್ನು ಇನ್ನೂ ವೀಕ್ಷಿಸಿಲ್ಲ ಎನ್ನುವವರು ಒಮ್ಮೆ ಕಣ್ತುಂಬಿಕೊಂಡು ಧನ್ಯರಾಗಲು ಇದು ಸಕಾಲ...

**- ಯಗಟಿ** ರಘು ನಾಡಿಗ್


## 11-01-2026 ದಿನ ಭವಿಷ್ಯ



**ಮೇಷ:** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ. ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ ಹಾಗೂ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಿ. ಇಂದು ಮನೆಯ ಯಾವುದೇ ಎಲೆಕ್ಟ್ರಾನಿಕ್ ಸರಕುಗಳ ಕೆಟ್ಟು ಹೋಗುವ ಕಾರಣದಿಂದಾಗಿ ನಿಮ್ಮ ಹಣ ಖರ್ಚಾಗಬಹುದು.



**ವೃಷಭ:** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭ ಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ದಿನದಲ್ಲಿ ಅನಿರೀಕ್ಷಿತವಾದ ಒಳ್ಳೆಯ ಸುದ್ದಿ ಇಡೀ ಕುಟುಂಬಕ್ಕೆ ಸಂತೋಷ ಮತ್ತು ಆನಂದ ತೆರೆದಿಡುತ್ತದೆ. ಏಕಪಕ್ಷೀಯ ವ್ಯಾಮೋಹ ಹಾನಿಕಾರಕವೆಂದು ಸಾಬೀತಾಗುತ್ತದೆ.



**ಮಿಥುನ:** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಜೀವನದ ಕೆಟ್ಟ ಕಾಲದಲ್ಲಿ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ ಆದ್ದರಿಂದ ಇಂದಿನಿಂದಲೇ ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಯೋಚಿಸಿ ಇಲ್ಲದಿದ್ದರೆ ನೀವು ತೊಂದರೆಗೊಳಗಾಗಬಹುದು. ಕುಟುಂಬದ ಸದಸ್ಯರು ನಿಮ್ಮ ನಿರೀಕ್ಷೆಗಳನ್ನು ಪೂರೈಸದಿರಬಹುದು.



**ಕರ್ಕಾಟಕ:** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿ ಸಲು ಪ್ರಯತ್ನಿಸಿ. ನಿಮ್ಮ ಪೋಷಕರನ್ನು ಸಂತುಷ್ಟಪಡಿಸುವುದು ನಿಮಗೆ ಕಷ್ಟವೆನಿಸಬಹುದು. ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ, ಅವರ ದೃಷ್ಟಿಯಲ್ಲಿ ನೋಡಿ ಸಕಾರಾತ್ಮಕ ಫಲಿತಾಂಶಗಳನ್ನು ನೀಡಿ.



**ಸಿಂಹ:** ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಸಾಮಾಜಿಕ ಕೂಟ ಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ. ವೈಯಕ್ತಿಕ ಸಂಬಂಧಗಳು ಸೂಕ್ಷ್ಮ ಹಾಗೂ ಸಂವೇದನಾಶೀಲವಾಗಿವೆ. ಇಂದು ನಿಮ್ಮ ಸಂಗಾತಿಯ ಒಂದು ಸುಳ್ಳಿನಿಂದ ನಿಮಗೆ ಬೇಸರ ವಾಗಬಹುದಾದರೂ ಇದೊಂದು ಸಣ್ಣ ವಿಷಯವಾಗಿರುತ್ತದೆ.



**ಕನ್ಯಾ:** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಬ್ಯಾಂಕ್ ವ್ಯವಹಾರಗಳಲ್ಲಿ ಕಾಳಜಿ ವಹಿಸಬೇಕು. ನೀವು ಪ್ರೀತಿಸುವವರಿಂದ ಉಡುಗೊರೆಗಳನ್ನು ಪಡೆಯಲು ಹಾಗೂ ನೀಡಲು ಪವಿತ್ರವಾದ ದಿನ.



**ತುಲಾ:** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಆದರೆ ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನಿಮ್ಮ ಅತಿಥಿಗಳ ಜೊತೆ ಒರಟಾಗಿ ನಡೆದುಕೊಳ್ಳಬೇಡಿ.



**ವೃಶ್ಚಿಕ:** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವ ಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಒಂದು ಕುಟುಂಬದ ಒಟ್ಟಾಗುವಿಕೆಯಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ. ಇಂದು ನೀವು ನಿಮ್ಮ ಅತ್ಯುತ್ತಮ ನಡವಳಿಕೆಯನ್ನು ಹೊಂದಿರಬೇಕು - ಏಕೆಂದರೆ ನಿಮ್ಮ ಪ್ರೇಮಿ ಅಸಮಾಧಾನಗೊಳ್ಳಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.



**ಧನು:** ನಿಮ್ಮ ಅನಾರೋಗ್ಯದ ಬಗ್ಗೆ ಚರ್ಚಿಸುವುದನ್ನು ತಪ್ಪಿಸಿ. ನಿಮ್ಮ ಕಾಯಿಲೆಯ ಬಗ್ಗೆ ಹೆಚ್ಚು ಮಾತನಾಡಿದಷ್ಟೂ ಅದು ಇನ್ನೂ ಉಲ್ಬಣಗೊಳ್ಳುವುದರಿಂದ ನಿಮ್ಮ ಗಮನವನ್ನು ಬೇರೆಡೆಗೆ ಕಾಯಿಲೆಯಿಂದ ತಿರುಗಿಸಲು ಏನಾದರೂ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಇಂದು ನೀವು ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು.



**ಮಕರ:** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಮನರಂಜನೆ ಅಥವಾ ಹೊರನೋಟದ ಸುಧಾರಣೆಗಾಗಿ ಹೆಚ್ಚು ಖರ್ಚು ಮಾಡ ಬೇಡಿ. ಒಂದು ಹಳೆಯ ಸಂಪರ್ಕ ನಿಮಗೆ ಕೆಲವು ಸಮಸ್ಯೆಗಳನ್ನು ಸೃಷ್ಟಿಸಬಹುದು.



**ಕುಂಭ:** ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಿ ಮತ್ತು ನಿಮ್ಮ ವ್ಯಾಯಾಮವನ್ನು ತಪ್ಪದೆ ಮಾಡಿ. ಬಯಸದೆ ಇರುವ ಯಾವುದೇ ಅತಿಥಿ ಇಂದು ನಿಮ್ಮ ಮನೆಗೆ ಬರಬಹುದು, ಅವರು ಬರುವುದ ರಿಂದಾಗಿ ನೀವು ಬರುವ ತಿಂಗಳಿಗೆ ಮುಂದೂಡಲಾಯಿಸಿರುವ ಮನೆಯ ಆ ವಸ್ತುಗಳ ಮೇಲು ಖರ್ಚು ಮಾಡಬಹುದು. ಕೌಟುಂಬಿಕ ಸಮಸ್ಯೆಗೆ ಮೊದಲ ಆದ್ಯತೆ ನೀಡಬೇಕು.



**ಮೀನ:** ಮಾನಸಿಕ ಶಾಂತಿಗಾಗಿ ನಿಮ್ಮ ಒತ್ತಡವನ್ನು ಪರಿಹರಿಸಿ. ಇಂದು ನಿಮ್ಮ ಸಹೋದರ ಸಹೋದರಿಯರು ನಿಮ್ಮಿಂದ ಆರ್ಥಿಕ ಬೆಂಬಲವನ್ನು ಕೇಳಬಹುದು ಮತ್ತು ಅವರಿಗೆ ಸಹಾಯ ಮಾಡಿ ನೀವು ಸ್ವತಃ ಆರ್ಥಿಕ ಒತ್ತಡಕ್ಕೆ ಬರಬಹುದು. ಆದಾಗ್ಯೂ ಪರಿಸ್ಥಿತಿ ಬೇಗ ಸುಧಾರಿಸುತ್ತದೆ. ಇಂದು ಪ್ರೀತಿಪಾತ್ರರಿಗೆ ನಿಮ್ಮ ವಿಚಿತ್ರ ವರ್ತನೆಯ ಜೊತೆ ಏಗಲು ಅತ್ಯಂತ ಕಷ್ಟವಾಗುತ್ತದೆ.

# ಆಲೋಚನೆ ಬದಲಿಸಿಕೊಳ್ಳಿ



ಇದು ಶ್ರೀಮಂತನೊಬ್ಬನ ಕತೆ. ಆತ ಒಂದು ಶಹರದಲ್ಲಿ ವಾಸವಾಗಿದ್ದ. ಶ್ರೀಮಂತನೆಂದ ಮೇಲೆ ಹಣಕ್ಕೆಲ್ಲಿಯ ಕೊರತೆ? ಇದೇ ವಿಷಯ ಆತನಿಗೆ ಅಹಂಕಾರ ಬರುವಂತೆ ಮಾಡಿತ್ತು. ತಾನು ಏನು ಬೇಕಾದರೂ ಮಾಡಬಲ್ಲೆ ನೆಂಬ ಅಹಂಕಾರ ಆತನಲ್ಲಿ ಮನೆಮಾಡಿತ್ತು.

ಒಂದು ಬಾರಿ ಆತನ ಕಣ್ಣಿನಲ್ಲಿ ಇನ್‌ಫೆಕ್ಷನ್ ಆಯಿತು. ಬಹಳ ಕಣ್ಣುರಿಯಿಂದ ಬಳಲತೊಡಗಿದ. ವೈದ್ಯರ ಬಳಿ ಹೋದ. ಆದರೆ ಯಾವ ವೈದ್ಯರಿಗೂ ಅದನ್ನು ಗುಣಪಡಿಸಲಾಗಲಿಲ್ಲ. ಆತನ ಬಳಿ ಬಹಳಷ್ಟು ಹಣವಿತ್ತು. ಆತ ದೇಶವಿದೇಶಗಳಿಂದ ಅನೇಕ ವೈದ್ಯರನ್ನು ಕರೆಸಿಕೊಂಡ. ಕೊನೆಗೆ ಒಬ್ಬ ಹಿರಿಯ ವೈದ್ಯರು ಅವನ ರೋಗದ ಲಕ್ಷಣ ಕಂಡುಹಿಡಿದರು. ನಿಮ್ಮ ಕಣ್ಣಿಗೆ ಅಲರ್ಜಿ ಇದೆ. ನೀವು ಕೆಲವು ದಿನಗಳವರೆಗೆ ಹಸಿರು ಬಣ್ಣವನ್ನು ಮಾತ್ರ ನೋಡುತ್ತಿರಬೇಕು. ಬೇರೆ ಯಾವುದೇ ಬಣ್ಣವನ್ನು ನೋಡಿದರೂ ಕಣ್ಣಿಗೆ ತೊಂದರೆಯಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಇಷ್ಟಾದ ನಂತರ ಏನು ಮಾಡುವುದೆಂದು ಶ್ರೀಮಂತ ಯೋಚಿಸಿದ. ತಕ್ಷಣವೇ ಊರಲ್ಲಿರುವ ದೊಡ್ಡ ದೊಡ್ಡ ಪೇಂಟರ್‌ಗಳಿಗೆ ಕರೆ ಕಳುಹಿಸಿದ. ತನ್ನ ಇಡೀ ಬಂಗಲೆಗೆ ಹಸಿರು ಬಣ್ಣ ಬಳಿಯುವಂತೆ ಸೂಚಿಸಿದ. ನನಗೆ ಹಸಿರು ಬಣ್ಣದ ಹೊರತಾಗಿ ಬೇರೇನೂ ಕಾಣಬಾರದು. ನಾನು ತಿರುಗಾಡುವ ಜಾಗದಲ್ಲೆಲ್ಲ ಇದೇ ಬಣ್ಣ ಹಚ್ಚಿ ಎಂದು ಹೇಳಿದ. ಈ ಕಾರ್ಯಕ್ಕೆ ಬಹಳಷ್ಟು ಹಣ ಖರ್ಚಾಗತೊಡಗಿತು. ಇಷ್ಟಾದರೂ ಶ್ರೀಮಂತನ ಕಣ್ಣಿಗೆ ಬೇರೆ ಬಣ್ಣ ಕಂಡೇ ಕಾಣುತ್ತಿತ್ತು. ಇಡೀ ಊರಿಗೆ ಬಣ್ಣ ಹಚ್ಚಿಸುವುದು ಸಾಧ್ಯವಿಲ್ಲವಲ್ಲ?

ಒಮ್ಮೆ ಆ ಊರಿನಿಂದ ಒಬ್ಬ ಸಾಧು ಹಾದುಹೋಗುತ್ತಿದ್ದರು. ಅವರು ಸುತ್ತಲೂ ಹಸಿರು ಬಣ್ಣದ ಕಟ್ಟಡಗಳನ್ನು ನೋಡಿದರು. ಏಕೆ ಈ ರೀತಿ? ಎಂದು ಊರವರನ್ನು ಕೇಳಿದರು. ವಿಷಯವನ್ನೆಲ್ಲ ತಿಳಿದುಕೊಂಡ ಮೇಲೆ ಅವರು ನೇರವಾಗಿ ಶ್ರೀಮಂತನ ಬಳಿ ತೆರಳಿದರು. ಅಯ್ಯಾ, ನೀವು ಇಷ್ಟು ಹಣ ಖರ್ಚು ಮಾಡುವ ಅಗತ್ಯವೇ ಇಲ್ಲ. ನಿಮ್ಮ ಸಮಸ್ಯೆಗೆ ನನ್ನ ಬಳಿ ಪರಿಹಾರವಿದೆ. ನೀವು ಒಂದು ಹಸಿರು ಕನ್ನಡಕ ಖರೀದಿಸಿ ಧರಿಸಿಕೊಂಡರೆ ಸಾಕು, ನಿಮಗೆ ಎಲ್ಲವೂ ಹಸಿರಾಗಿ ಕಾಣುತ್ತದೆ ಎಂದು ಹೇಳಿದರು. ಶ್ರೀಮಂತ ಬಿಟ್ಟ ಕಣ್ಣು ಬಿಟ್ಟಂತೆ ನೋಡತೊಡಗಿದ. ಅವನ ತಲೆಯಲ್ಲಿ ಈ ವಿಚಾರ ಬಂದಿರಲೇ ಇಲ್ಲ. ಆತ ಸುಖಾಸುಮ್ಮನೆ ಹಣ ಖರ್ಚು ಮಾಡುತ್ತಲೇ ಇದ್ದ. ನಮ್ಮ ಆಲೋಚನೆ ಮತ್ತು ನೋಡುವ ದೃಷ್ಟಿಕೋನಗಳು ಬಹಳಷ್ಟು ವಿಚಾರಗಳ ಮೇಲೆ ಪ್ರಭಾವ ಬೀರುತ್ತವೆ. ಅನೇಕ ಬಾರಿ ಸಮಸ್ಯೆಗಳಿಗೆ ಪರಿಹಾರ ಬಹು ಸುಲಭವಾಗಿರುತ್ತದೆ. ಆದರೆ ನಾವು ಸಮಸ್ಯೆಯ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿರುತ್ತೇವೆ.

ಶ್ರೀ ರಾಜಾರಾಮ ಮಹಾರಾಜರು, ಸದ್ಗುರು ವಾಚೋನಿ ದುಃಖ ತೋಡವಿತಾ, ನ ದಿಸೇ ಪಾಹತಾ ತ್ರಿಭುವನಿ ಎಂದಿದ್ದಾರೆ. ಅಂದರೆ, ನಮ್ಮೆಲ್ಲ ಸಮಸ್ಯೆಗಳಿಗೆ ಗುರು ಮಾತ್ರ ಸರಳ ಪರಿಹಾರ ಸೂಚಿಸಬಲ್ಲರು ಎಂದು ಬಣ್ಣಿಸಿದ್ದಾರೆ. ನಮಗೆ ಸಮಸ್ಯೆಗಳಿರದ ದಿನಗಳು, ಸಮಸ್ಯೆಯಾಗದ ವಿಚಾರಗಳು ಇರದು. ಎಲ್ಲರದರೊಳಗೂ ಸಮಸ್ಯೆಯನ್ನು ಹುಡುಕುವ ಸೂಕ್ಷ್ಮ (ಕುರೂಪಿ) ಮನಸ್ಸು ನಮ್ಮದು. ಸಮಸ್ಯೆಯನ್ನು ನುಂಗುತ್ತೇವೆ; ಯಾರೊಡನೆಯೂ ಹಂಚಿಕೊಳ್ಳುವುದಿಲ್ಲ. ಮನದೊಳಗೆ ಕುದಿಯುವ ಸಮಸ್ಯೆಗಳ ಸಂಖ್ಯೆ ಏರುತ್ತಿರುತ್ತವೆಯೇ ಹೊರತು ಪರಿಹಾರ ಎತ್ತಿನ ಕೋಡಿನಲ್ಲೇ ಇರುತ್ತದೆ. ಮನಸ್ಸಿನೊಳಗೆ ಬೆಳೆಯುವ ಸಮಸ್ಯೆಗಳು ನಮ್ಮ ಹೃದಯ ಸ್ಥಂಬನಕ್ಕೆ ಕಾರಣವಾದರೂ ವಿಶೇಷವಲ್ಲ. ಸಮಸ್ಯೆಗಳಿಗೆ ಆಯಾ ದಿನವೇ ಪರಿಹಾರ ಕಂಡುಕೊಳ್ಳಬೇಕು. ಅದಕ್ಕಾಗಿ ನಮ್ಮ ಸಮಸ್ಯೆಗಳನ್ನು ಇತರರಿಗೆ ಉಣ ಬಡಿಸಬೇಕು, ಅವರು ಗುರುಗಳಿರಬಹುದು, ಗೆಳೆಯರಿರಬಹುದು, ಹೆತ್ತವರು, ಸೋದರ ಸೋದರಿಯರು, ಒಡಹುಟ್ಟಿದವರು... ಹೀಗೆ ಇವರ ಮುಂದೆ ಸಮಸ್ಯೆಯನ್ನು ಮುಕ್ತವಾಗಿಟ್ಟಾಗ ಯಾರಾದರು ಒಬ್ಬರು ಸೂಕ್ತವಾದ ಪರಿಹಾರ ನೀಡಿಯೇ ನೀಡುವರು.

**- ರಮೇಶ ಎಂ. ಬಾಯಾರು,** ಬಂಟ್ವಾಳ

# ದಂತಕತೆಯಾದ ದಂತ ರಾಜ: ಒಂದು ಆನೆಯ ಮಹಾಪಯಣ

ನೂರೆಂಟು ವಿಶ್ವ ಮೊನ್ನೆ ಹೊಸ ವರ್ಷದ ಮೂರನೇ ದಿನ ಆಫ್ರಿಕಾದ ಉದ್ಯಾನವೊಂದರಲ್ಲಿ ಆನೆಯೊಂದು ಸತ್ತಿದ್ದು ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾಯಿತು. ಅಮೆರಿಕ ಸೇರಿದಂತೆ ಜಗತ್ತಿನ ಅನೇಕ ಪತ್ರಿಕೆಗಳು ಇದನ್ನು ಮುಖಪುಟದಲ್ಲಿ ದೊಡ್ಡದಾಗಿ ಚಿತ್ರಸಮೇತ ಪ್ರಕಟಿಸಿದವು.

ಒಂದು ಆನೆಯ ಸಾವು ಪ್ರತಿಷ್ಠಿತ ಪತ್ರಿಕೆಗಳ ಮುಖಪುಟದಲ್ಲಿ ಸುದ್ದಿಯಾದದ್ದಷ್ಟೇ ಅಲ್ಲ, ಸಾಮಾಜಿಕ ಜಾಲತಾಣಗಳಲ್ಲೂ ಕಂಬನಿಯನ್ನೇ ಹರಿಸಿತು. ಸತ್ತಿದ್ದು ಅಂತಿಂಥ ಆನೆಯಲ್ಲ. ಅದು ಜಗತ್ತಿನ ಅತ್ಯಂತ ಸುಪರದ್ರೂಪಿ, ಸ್ಟಾರ್ ಅಥವಾ ಸೆಲೆಬ್ರಿಟಿ ಸ್ಟೇಟಸ್ ಹೊಂದಿರುವ ಆನೆ. ಆ ಆನೆಯ ಸಾವಿಗೆ ಗಣ್ಯರೆನಿಸಿಕೊಂಡವರ ಶೋಕ ಸಂದೇಶವನ್ನು ನೋಡಿದ ನಂತರ ಆ ಆನೆಯ ಅಸಲಿ ವ್ಯಕ್ತಿತ್ವ ಗೊತ್ತಾಯಿತು.

ಆಫ್ರಿಕಾ ಖಂಡದ ಕೀನ್ಯಾದಲ್ಲಿರುವ ಅಂಬೋಸೆಲಿ ರಾಷ್ಟ್ರೀಯ ಉದ್ಯಾನವನದ ದೈತ್ಯ ಆನೆಗಳಿಗೆ ಹೆಸರುವಾಸಿ. ಅಲ್ಲಿನ ಆನೆಗಳಲ್ಲಿ ಅತ್ಯಂತ ಆಕರ್ಷಕ ಮತ್ತು ಜನಪ್ರಿಯವಾಗಿದ್ದ ವನೇ ಕ್ರೇಗ್. ಆತ ಸೂಪರ್ ಟಸ್ಕರ್ ಎಂದೇ ಪ್ರಸಿದ್ಧ. ಅವನ ದಂತಗಳು ಅತಿ ವಿರಳಾತಿ ವಿರಳ, ಅತಿ ಸುಂದರ, ಅಚ್ಚರಿಯೆನಿಸುವಷ್ಟು ಉದ್ದ ಮತ್ತು ಭಾರವಾಗಿದ್ದವು.

ಜಗತ್ತಿನಾದ್ಯಂತ ಛಾಯಾಗ್ರಾಹಕರು ಮತ್ತು ಪ್ರವಾಸಿಗರು ಮೌಂಟ್ ಕಿಲಿಮಂಜಾರೋ ಪರ್ವತದ ಹಿನ್ನೆಲೆಯಲ್ಲಿ ಕ್ರೇಗ್‌ನ ಒಂದು ಫೋಟೋ ತೆಗೆಯಲು ಕಾದು ಕುಳಿತಿರುತ್ತಿದ್ದರು. ಅವನ ಒಂದು ವಿಶೇಷ ಪೋಸು ಸಿಕ್ಕರೆ ತಮ್ಮ ಪ್ರವಾಸ, ಪ್ರಯತ್ನ ಸಾರ್ಥಕ ಎಂದು ಭಾವಿಸುತ್ತಿದ್ದರು.

ಆತ ರಾಜಗಾಂಭೀರ್ಯದಲ್ಲಿ ನಡೆದು ಬರುತ್ತಿದ್ದರೆ, ಅದು ದೈವಿಕವಾಗಿ ಗೋಚರಿಸುತ್ತಿತ್ತು. ಆಗ ಅವನನ್ನು ದಿಟ್ಟಿಸಿ ನೋಡಬೇಕೋ, ಫೋಟೋ ಕ್ಲಿಕ್ಕಿಸಬೇಕೋ ಎಂಬ ಬಗ್ಗೆ ಗೊಂದಲವಾಗುತ್ತಿತ್ತು. ಕ್ರೇಗ್ ಹಾಗಿದ್ದ. ಜಗತ್ತಿನ ಅಗ್ರಮಾನ್ಯ ವನ್ಯಜೀವಿ ಛಾಯಾಗ್ರಾಹಕರು ಆತನ ಫೋಟೋ ಸೆರೆ ಹಿಡಿದು ತಮ್ಮ ಖ್ಯಾತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದರು.

ಕ್ರೇಗ್ ಜನಿಸಿದ್ದು ಜನವರಿ 1972ರಲ್ಲಿ, ಅವನ ತಾಯಿ ಅಂಬೋಸೆಲಿಯ ಪ್ರಸಿದ್ಧ ಉದ್ಯಾನವನದ ಕುಟುಂಬದ ನಾಯಕಿ ಕ್ಯಾಸಂಡ್ರಾ. 1970 ಮತ್ತು 80ರ ದಶಕಗಳಲ್ಲಿ ಆಫ್ರಿಕಾದಲ್ಲಿ ಆನೆಗಳ ಬೇಟೆ ವಿಪರೀತವಾಗಿತ್ತು. ದಂತವಿರುವ ಆನೆಗಳನ್ನು ಸಾಯಿಸದೇ ಬಿಡುತ್ತಿರಲಿಲ್ಲ. ಆ ಸಮಯದಲ್ಲಿ ಜನಿಸಿದ ಕ್ರೇಗ್, ಬೇಟೆಗಾರರ ಕಣ್ಣಿಗೆ ಬೀಳದೇ ಬದುಕುಳಿದದ್ದು ಒಂದು ಅದ್ಭುತವೇ ಸರಿ.

ಅವನ ಆರಂಭಿಕ ವರ್ಷಗಳು ಕಠಿಣವಾಗಿದ್ದರೂ, ಕೀನ್ಯಾ ವನ್ಯಜೀವಿ ಸೇವೆ ಮತ್ತು ಸ್ಥಳೀಯ ಮಸಾಯಿ ಸಮುದಾಯದವರ ಜಾಗರೂಕತೆಯಿಂದ ಅವನು ಬಚಾವ್ ಆದ. ಕ್ರೇಗ್‌ನ ದಂತಗಳು ನೆಲಕ್ಕೆ ತಾಗುವಷ್ಟು ಉದ್ದವಾಗಿದ್ದವು. ಅವನ ಪ್ರತಿಯೊಂದು ದಂತವು ಸುಮಾರು 45 ಕೆಜಿಗಿಂತಲೂ ಹೆಚ್ಚು ಭಾರವಿದ್ದವು. ದಂತಗಳು ಬಾಗಿ ನೆಲದ ಮೇಲೆ ತಾಗುವಷ್ಟು ಉದ್ದವಿದ್ದ ಕಾರಣ ಅವನ ನಡಿಗೆಯಲ್ಲಿ ಒಂದು ರೀತಿಯ ಗಾಂಭೀರ್ಯವಿತ್ತು.

ಆನೆಯ ಎರಡೂ ದಂತಗಳು ಮುರಿದುಹೋಗದೇ ಅಥವಾ ಸವೆದು ಹೋಗದೇ ಪೂರ್ಣ ಪ್ರಮಾಣದಲ್ಲಿ ಬೆಳೆದಿದ್ದು ಅವನ ವೈಶಿಷ್ಟ್ಯವಾಗಿತ್ತು. ಕ್ರೇಗ್ ತನ್ನ ಅಗಾಧ ಗಾತ್ರದ ಹೊರತಾಗಿಯೂ ಅತ್ಯಂತ ಶಾಂತ ಮತ್ತು ಸೌಮ್ಯ ಸ್ವಭಾವದವನಾಗಿದ್ದ. ಪ್ರವಾಸಿ ವಾಹನಗಳು ಅಥವಾ ವನ್ಯಜೀವಿ ಸಂಶೋಧಕರು ಹತ್ತಿರ ಬಂದಾಗಲೂ ಅವನು ಎಂದಿಗೂ ಆಕ್ರಮಣಕಾರಿಯಾಗಿ ವರ್ತಿಸುತ್ತಿರಲಿಲ್ಲ.

ಅವನ ಈ ತಾಳ್ಮೆಯೇ ಅವನನ್ನು ಪ್ರಪಂಚದ ಅತ್ಯಂತ ಹೆಚ್ಚು ಫೋಟೋ ತೆಗೆಸಿಕೊಂಡ ಆನೆಯನ್ನಾಗಿ ಮಾಡಿತು. ಅವನು ತನ್ನ ಗುಂಪಿನ ಇತರ ಕಿರಿಯ ಆನೆಗಳಿಗೆ ಮಾರ್ಗ ದರ್ಶಕನಾಗಿದ್ದ. ಆನೆಗಳ ಸಂಸ್ಕೃತಿಯಲ್ಲಿ ಹಿರಿಯ ಆನೆಗಳು ಹೇಗೆ ಕಿರಿಯರಿಗೆ ವರ್ತನೆಯನ್ನು ಕಲಿಸುತ್ತವೆ ಹಾಗೂ ಆಹಾರ ಮತ್ತು ನೀರಿನ ನೆಲೆಗಳನ್ನು ಹುಡುಕುವುದನ್ನು ಕಲಿಸುತ್ತವೆ ಎಂಬುದಕ್ಕೆ ಕ್ರೇಗ್ ಅತ್ಯುತ್ತಮ ಉದಾಹರಣೆಯಾಗಿದ್ದ.

ಕ್ರೇಗ್‌ನ ಕುತ್ತಿಗೆಗೆ ಅಳವಡಿಸಲಾಗಿದ್ದ ಜಿಪಿಎಸ್ ಕಾಲರ್ ಆತನ ರಕ್ಷಣೆಯ ಮೊದಲ ಕವಚವಾಗಿತ್ತು. ಈ ಕಾಲರ್ ಮೂಲಕ ಆತ ಅಂಬೋಸೆಲಿ ಉದ್ಯಾನವನದ ಯಾವ ಭಾಗದಲ್ಲಿದ್ದಾನೆ ಎಂಬುದು ಪ್ರತಿ ನಿಮಿಷವೂ ರೇಂಜರ್‌ಗಳ ನಿಯಂತ್ರಣ ಕೊಠಡಿಗೆ ತಿಳಿಯುತ್ತಿತ್ತು.

ಉದ್ಯಾನವನದ ಸುತ್ತಲೂ ಡಿಜಿಟಲ್ ಗಡಿಯನ್ನು ಗುರುತಿಸಲಾಗಿತ್ತು. ಕ್ರೇಗ್ ಈ ಗಡಿಯನ್ನು ದಾಟಿ ರೈತರ ಜಮೀನುಗಳಿಗೆ ಅಥವಾ ಅಪಾಯಕಾರಿ ಪ್ರದೇಶಗಳಿಗೆ ಹೋದ ತಕ್ಷಣ ರೇಂಜರ್‌ಗಳ ಮೊಬೈಲ್‌ಗೆ ಅಲರ್ಟ್ ಸಂದೇಶ ಹೋಗುತ್ತಿತ್ತು.

ಕಾಲರ್‌ನಲ್ಲಿರುವ ಸೆನ್ಸರ್‌ಗಳು ಆತನ ನಡಿಗೆಯ ವೇಗವನ್ನು ಗಮನಿಸುತ್ತಿದ್ದವು. ಆತ ದೀರ್ಘಕಾಲ ಒಂದೇ ಕಡೆ ಅಲುಗಾಡದೇ ನಿಂತಿದ್ದರೆ, ಆತನಿಗೆ ಏನಾದರೂ ತೊಂದರೆಯಾಗಿದೆಯೇ ಎಂದು ಪರೀಕ್ಷಿಸಲು ತಂಡವು ತಕ್ಷಣ ಸ್ಥಳಕ್ಕೆ ಧಾವಿಸುತ್ತಿತ್ತು. ಕ್ರೇಗ್‌ಗೆ ಒಬ್ಬ ಸೆಲೆಬ್ರಿಟಿಯಂತೆ ರಕ್ಷಣೆ ನೀಡಲಾಗುತ್ತಿತ್ತು. ಬಿಗ್ ಲೈಫ್ ಪ್ರತಿಷ್ಠಾನ ಮತ್ತು ಕೀನ್ಯಾ ವನ್ಯಜೀವಿ ಸೇವೆಯ ರೇಂಜರ್‌ಗಳು ಆತನಿಗೆ ನೆರಳಿನಂತೆ ಇರುತ್ತಿದ್ದರು.

ವಿಶೇಷವಾಗಿ ಹುಣ್ಣಿಮೆಯ ದಿನಗಳಲ್ಲಿ (ಬೇಟೆಗಾರರು ಹೆಚ್ಚಾಗಿ ಈ ಸಮಯದಲ್ಲಿ ಬರುತ್ತಾರೆ) ರೇಂಜರ್‌ಗಳು ಆನೆ ಇರುವ ಸುತ್ತಮುತ್ತಲಿನ ಗುಡ್ಡಗಳ ಮೇಲೆ ನಿಂತು ನೈಟ್ ವಿಷನ್ ಬೈನಾಕ್ಯುಲರ್‌ಗಳ ಮೂಲಕ ಕಣ್ಗಾವಲು ಇಡುತ್ತಿದ್ದರು. ಕ್ರೇಗ್ ಆಹಾರಕ್ಕಾಗಿ ಹಳ್ಳಿಗಳ ಕಡೆ ಹೋದಾಗ, ರೇಂಜರ್‌ಗಳು ಗ್ರಾಮಸ್ಥರ ಮತ್ತು ಆನೆಯ ನಡುವೆ ಗೋಡೆಯಂತೆ ನಿಲ್ಲುತ್ತಿದ್ದರು.

ಪಟಾಕಿಗಳನ್ನು ಸಿಡಿಸಿ ಅಥವಾ ವಾಹನಗಳ ಬೆಳಕನ್ನು ಬಳಸಿ ಕ್ರೇಗ್‌ಗೆ ಯಾವುದೇ ಹಾನಿಯಾಗದಂತೆ ಮರಳಿ ಕಾಡಿಗೆ ಓಡಿಸುತ್ತಿದ್ದರು. ಕ್ರೇಗ್‌ನ ಸಂರಕ್ಷಣೆಯಲ್ಲಿ ಅಂಬೋಸೆಲಿ ಸುತ್ತಮುತ್ತ ವಾಸಿಸುವ ಮಸಾಯಿ ಜನರ ಪಾತ್ರ ಬಹಳ ದೊಡ್ಡದು. ಮಸಾಯಿ ಜನರು ಕ್ರೇಗ್‌ನನ್ನು ತಮ್ಮ ಸಮುದಾಯದ ಒಬ್ಬ ಹಿರಿಯ ಸದಸ್ಯನಂತೆ ಗೌರವಿಸುತ್ತಿದ್ದರು.

ಕಾಡಿನಲ್ಲಿ ಯಾವುದೇ ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದರೆ ಮಸಾಯಿ ಜನರು ತಕ್ಷಣವೇ ರೇಂಜರ್‌ಗಳಿಗೆ ಮಾಹಿತಿ ನೀಡುತ್ತಿದ್ದರು. ಈ ಸಮುದಾಯದ ಸಹಭಾಗಿತ್ವವೇ ಕ್ರೇಗ್ 54 ವರ್ಷಗಳ ಕಾಲ ಸುದೀರ್ಘವಾಗಿ ಬದುಕಲು ಮುಖ್ಯ ಕಾರಣವಾಯಿತು.

ಕ್ರೇಗ್‌ನಂಥ ಸೂಪರ್ ಟಸ್ಕರ್ ಆನೆಯನ್ನು ರಕ್ಷಿಸುವುದು ಕೇವಲ ಒಂದು ಪ್ರಾಣಿಯನ್ನು ಉಳಿಸುವುದಲ್ಲ, ಬದಲಾಗಿ ಒಂದು ರಾಷ್ಟ್ರೀಯ ಸಂಪತ್ತನ್ನು ಕಾಯ್ದಂತಾಗಿತ್ತು. ಆತನ ಬೃಹತ್ ದಂತಗಳ ಕಾರಣದಿಂದಾಗಿ ಆತ ಸದಾ ಬೇಟೆಗಾರರ ಹಿಟ್ ಲಿಸ್ಟ್‌ನಲ್ಲಿದ್ದ. ನೆಲದ ಮೇಲಿನ ರಕ್ಷಣೆಯ ಜತೆಗೆ ಆಕಾಶದಿಂದಲೂ ಕ್ರೇಗ್‌ನ ಮೇಲೆ ನಿಗಾ ಇಡಲಾಗುತ್ತಿತ್ತು.

ಲಘು ವಿಮಾನಗಳು ಮತ್ತು ಡ್ರೋನ್‌ಗಳನ್ನು ಬಳಸಿ ಅಂಬೋಸೆಲಿಯ ವಿಶಾಲ ಭೂ ಪ್ರದೇಶವನ್ನು ಸ್ಕ್ಯಾನ್ ಮಾಡಲಾಗುತ್ತಿತ್ತು. ಇದರಿಂದ ದಟ್ಟ ಕಾಡಿನಲ್ಲಿ ಬೇಟೆಗಾರರು ಅಡಗಿಕೊಂಡಿದ್ದರೆ ಸುಲಭವಾಗಿ ಪತ್ತೆ ಹಚ್ಚಲು ಸಾಧ್ಯವಾಗುತ್ತಿತ್ತು. ತಂತ್ರಜ್ಞಾನದಷ್ಟೇ ಪ್ರಮುಖವಾಗಿದ್ದುದು ಹ್ಯೂಮನ್ ಇಂಟೆಲಿಜೆನ್ಸ್.

> **ಜಗತ್ತಿನಾದ್ಯಂತ ಛಾಯಾಗ್ರಾಹಕರು ಮತ್ತು ಪ್ರವಾಸಿಗರು ಮೌಂಟ್ ಕಿಲಿಮಂಜಾರೋ ಪರ್ವತದ ಹಿನ್ನೆಲೆಯಲಿ ಕ್ರೇಗ್‌ನ ಒಂದು ಫೋಟೋ ತೆಗೆಯಲು ಕಾದು ಕುಳಿತಿರುತ್ತಿದ್ದರು. ಅವನ ಒಂದು ವಿಶೇಷ ಪೋಸು ಸಿಕ್ಕರೆ ತಮ್ಮ ಪ್ರವಾಸ, ಪ್ರಯತ್ನ ಸಾರ್ಥಕ ಎಂದು ಭಾವಿಸುತ್ತಿದ್ದರು.**

ಸ್ಥಳೀಯ ಸಮುದಾಯದ ಜನರಿಗೆ ಆನೆಗಳನ್ನು ರಕ್ಷಿಸುವ ಬಗ್ಗೆ ತರಬೇತಿ ನೀಡಲಾಗಿತ್ತು. ಅಪರಿಚಿತ ವ್ಯಕ್ತಿಗಳು ಅಥವಾ ಬೇಟೆಗಾರರ ತಂಡಗಳು ಕಾಡಿನ ಹತ್ತಿರ ಸುಳಿದಾಡಿದರೆ ಅವರು ತಕ್ಷಣ ರೇಂಜರ್‌ಗಳಿಗೆ ರಹಸ್ಯ ಮಾಹಿತಿ ನೀಡುತ್ತಿದ್ದರು. ಸರಿಯಾದ ಮಾಹಿತಿ ನೀಡುವ ಹಳ್ಳಿಗರಿಗೆ ಬಹುಮಾನ ನೀಡುವ ಮೂಲಕ ರಕ್ಷಣಾ ಕಾರ್ಯದಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲಾಗಿತ್ತು.

ಕ್ರೇಗ್ ಜನವಸತಿ ಪ್ರದೇಶಕ್ಕೆ ಹೋದಾಗ ಬೆಳೆ ಹಾನಿ ಮಾಡುವುದು ಸಹಜ. ಆದರೆ, ಸರಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ರೈತರಿಗೆ ಆಗುವ ಹಾನಿಗೆ ತಕ್ಷಣ ಪರಿಹಾರ ಧನ ನೀಡುತ್ತಿದ್ದವು. ಇದರಿಂದ ಜನರು ಕ್ರೇಗ್ ಮೇಲೆ ಕೋಪಗೊಳ್ಳುವ ಬದಲು, ಅದನ್ನು ತಮ್ಮ ಹೆಮ್ಮೆ ಎಂದು ಭಾವಿಸಿ ರಕ್ಷಿಸುತ್ತಿದ್ದರು. ಆತ ಬೆಳೆ ಹಾನಿ ಮಾಡಿದರೂ ಆತನಿಗೆ ಕಸೆಯುತ್ತಿರಲಿಲ್ಲ. ಆತನಿಗೆ ಹಿಂಸೆ ನೀಡುತ್ತಿರಲಿಲ್ಲ.

ಆತ ಬಂದು ಬೆಳೆ ಧ್ವಂಸ ಮಾಡಿ ಹೋದರೆ, ರೈತರು ಬೇಸರಿಸಿಕೊಳ್ಳುತ್ತಿರಲಿಲ್ಲ. ಕ್ರೇಗ್‌ನಂಥ ದೈತ್ಯ ಆನೆಗಳನ್ನು ರಕ್ಷಿಸಲು ವಾರ್ಷಿಕವಾಗಿ ಕೋಟ್ಯಂತರ ರುಪಾಯಿ ವೆಚ್ಚವಾಗುತ್ತಿತ್ತು. ಬಿಗ್ ಲೈಫ್ ಪ್ರತಿಷ್ಠಾನ ಕೇವಲ ಸರಕಾರಿ ಅನುದಾನವನ್ನು ನಂಬಿಕೊಳ್ಳದೇ, ಬೇರೆ ಬೇರೆ ಮೂಲಗಳಿಂದ ಹಣಕಾಸು ನೆರವನ್ನು ಸಂಗ್ರಹಿಸುತ್ತಿತ್ತು. ಕ್ರೇಗ್ ಹೆಸರು ಹೇಳಿ ನೆರವು ಯಾಚಿಸಿದರೆ, ವನ್ಯಜೀವಿ ಪ್ರೇಮಿಗಳು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು.

ಕ್ರೇಗ್‌ನಿಂದ ರೈತರ ಬೆಳೆ ನಾಶವಾಗದಂತೆ, ರೈತರ ಜಮೀನು ಮತ್ತು ಕಾಡಿನ ಮಧ್ಯೆ ಕಿಲೋ ಮೀಟರ್‌ಗಟ್ಟಲೆ ಉದ್ದದ ಆನೆ-ನಿರೋಧಕ ವಿದ್ಯುತ್ ಬೇಲಿಗಳನ್ನು ನಿರ್ಮಿಸಲು ಮತ್ತು ನಿರ್ವಹಿಸಲು ಲಕ್ಷಾಂತರ ಡಾಲರ್ ವೆಚ್ಚವಾಗುತ್ತಿತ್ತು. ಹಣಕಾಸಿನ ಒಂದು ದೊಡ್ಡ ಭಾಗವು ಕೇವಲ ರಕ್ಷಣೆಗೆ ಮಾತ್ರವಲ್ಲದೇ, ಸ್ಥಳೀಯರೊಂದಿಗೆ ಶಾಂತಿ ಕಾಪಾಡಲು ಬಳಕೆಯಾಗುತ್ತಿತ್ತು.

ಬಿಗ್ ಲೈಫ್ ಫೌಂಡೇಶನ್ ಸುಮಾರು 300ಕ್ಕೂ ಹೆಚ್ಚು ಸ್ಥಳೀಯ ರೇಂಜರ್‌ಗಳನ್ನು ಕೆಲಸಕ್ಕೆ ನೇಮಿಸಿಕೊಂಡಿತ್ತು. ಅವರ ಸಂಬಳ, ಸಾರಿಗೆ, ಸಮವಸ, ಶಸ್ತ್ರಾಸ್ತ್ರ ಮತ್ತು ವೈದ್ಯಕೀಯ ವಿಮೆಯು ಸಂಸ್ಥೆಯ ಬಜೆಟ್‌ನ ಅತಿ ದೊಡ್ಡ ಭಾಗವಾಗಿತ್ತು. ಕ್ರೇಗ್‌ನನ್ನು ಕಾಯಲು ಒಂದು ಗಂಟೆಯ ವಿಮಾನ ಹಾರಾಟದ ಸರ್ವೇಗೆ ಇಂಧನ ಮತ್ತು ಪೈಲಟ್ ವೆಚ್ಚ ಸೇರಿ ಸಾವಿರಾರು ಡಾಲರ್‌ಗಳು ತಗುಲುತ್ತಿದ್ದವು.

ನೈಟ್ ವಿಷನ್ ಡ್ರೋನ್‌ಗಳ ಬಳಕೆಗೂ ವಿಪರೀತ ವೆಚ್ಚವಾಗುತ್ತಿತ್ತು. ಆದರೆ ಬಿಗ್ ಲೈಫ್ ಫೌಂಡೇಶನ್ ಈ ವಿಷಯದಲ್ಲಿ ರಾಜಿ ಆಗಲಿಲ್ಲ. ಸ್ಥಳೀಯ ಮಸಾಯಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕ್ರೇಗ್ ನನ್ನ ಯಾಕೆ ಉಳಿಸಿಕೊಳ್ಳಬೇಕು ಎಂಬ ಬಗ್ಗೆ ಜಾಗೃತಿ ಮೂಡಿಸಿ, ಅವರಲ್ಲಿ ಆತನ ಬಗ್ಗೆ ಅಭಿಮಾನವನ್ನು ಮೂಡಿಸಿತು.

ಕ್ರೇಗ್ ನ ಸಂರಕ್ಷಣೆಯಲ್ಲಿ ತಮ್ಮ ಅಸ್ತಿತ್ವವಿದೆ ಎಂದು ಆ ಜನ ಭಾವಿಸಿದ್ದರು. ಮಸಾಯಿ ಜನ ಆತನನ್ನು ತಮ್ಮ ಮಗನಂತೆ ಪ್ರೀತಿಸುತ್ತಿದ್ದರು. ಕೀನ್ಯಾದ ಅತ್ಯಂತ ಹಳೆಯ ಮತ್ತು ಪ್ರಸಿದ್ಧ ಬಿಯರ್ ಬ್ರ್ಯಾಂಡ್ ಆದ ಟಸ್ಕರ್ ತನ್ನ ಲೋಗೋದಲ್ಲಿ ಕ್ರೇಗ್ ನ ಚಿತ್ರವನ್ನು ಹಾಕಿತು. 2021ರಲ್ಲಿ ತನ್ನ 100ನೇ ವರ್ಷಾಚರಣೆಯ ಸಂದರ್ಭದಲ್ಲಿ, ಈ ಸಂಸ್ಥೆಯು ಕ್ರೇಗ್ ನನ್ನು ತನ್ನ ಬ್ರ್ಯಾಂಡ್ ರಾಯಭಾರಿಯನ್ನಾಗಿ ಘೋಷಿಸಿತು.

ವನ್ಯಜೀವಿಗಳ ಸಂರಕ್ಷಣೆಗಾಗಿ ಹಣ ಸಂಗ್ರಹಿಸುವುದು ಮತ್ತು ಆನೆಗಳ ಅಕ್ರಮ ಬೇಟೆಯ ವಿರುದ್ಧ ಜಾಗೃತಿ ಮೂಡಿಸುವುದು ಆಶಯವಾಗಿತ್ತು. ಕ್ರೇಗ್‌ನನ್ನು ನೋಡಲೆಂದೇ ಸಾವಿರಾರು ಪ್ರವಾಸಿಗರು ಅಂಬೋಸೆಲಿ ರಾಷ್ಟ್ರೀಯ ಉದ್ಯಾನವನಕ್ಕೆ ಬರುತ್ತಿದ್ದರು, ಇದು ಕೀನ್ಯಾದ ಆರ್ಥಿಕತೆಗೆ ದೊಡ್ಡ ಬಲ ನೀಡುತ್ತಿತ್ತು. ಒಂದು ಆನೆ ತನ್ನ ಬದುಕಿನ ಮೂಲಕ ಇಡೀ ದೇಶದ ಪ್ರವಾಸೋದ್ಯಮವನ್ನು ಹೇಗೆ ಬೆಳೆಸಬಹುದು ಮತ್ತು ಜನರ ಮನಸ್ಸನ್ನು ಹೇಗೆ ಗೆಲ್ಲಬಹುದು ಎಂಬುದಕ್ಕೆ ಕ್ರೇಗ್ ಮಾದರಿಯಾಗಿದ್ದ.

ವನ್ಯಜೀವಿ ತಜ್ಞರ ಪ್ರಕಾರ, ವಯಸ್ಸಾದಂತೆ ಆನೆಗಳ ಹಲ್ಲುಗಳು ಸವೆಯುತ್ತವೆ. ಕ್ರೇಗ್‌ನ ಹಲ್ಲುಗಳು ಸಂಪೂರ್ಣವಾಗಿ ಸವೆದು ಹೋಗಿದ್ದರಿಂದ ಅವನಿಗೆ ಆಹಾರವನ್ನು ಸರಿಯಾಗಿ ಅಗಿಯಲು ಸಾಧ್ಯವಾಗುತ್ತಿರಲಿಲ್ಲ. ಸರಿಯಾದ ಪೋಷಕಾಂಶಗಳು ಸಿಗದೇ ಅವನು ತನ್ನ ಅಂತಿಮ ದಿನಗಳನ್ನು ಕಳೆದು, ಅಂಬೋಸೆಲಿಯ ಮುಕ್ತ ಭೂಮಿಯ ತನ್ನ 54ನೇ ವಯಸ್ಸಿನಲ್ಲಿ, ಜನವರಿ 3, 2026ರಂದು ಸಹಜ ಸಾವನ್ನಪ್ಪಿದ.

ಬೇಟೆಗಾರರಿಂದ ಸಾಯದೇ, ವಯೋಸಹಜವಾಗಿ, ನೈಸರ್ಗಿಕವಾಗಿ ಮರಣ ಹೊಂದುವುದು ಅತಿ ಉದ್ದದ ದಂತಗಳಿರುವ ಆನೆಗಳ ಮಟ್ಟಿಗೆ ದೊಡ್ಡ ವಿಜಯವೇ. ಕ್ರೇಗ್‌ನ ದಂತಗಳು ಕೇವಲ ಮೂಳೆಯ ಭಾಗಗಳಲ್ಲ, ಅವು ಪ್ರಕೃತಿಯ ಅದ್ಭುತ ವಾಸ್ತುಶಿಲ್ಪ ದಂತೆ ಇದ್ದವು. ಕ್ರೇಗ್ ಕೀನ್ಯಾದ ಆನೆ ಸಂರಕ್ಷಣಾ ವ್ಯವಸ್ಥೆಯ ಯಶಸ್ಸಿನ ಪ್ರತೀಕವಾಗಿದ್ದ. ಆತನ ಸಾವು ವನ್ಯಜೀವಿ ಪ್ರಿಯರಲ್ಲಿ ದುಃಖ ತಂದಿದ್ದರೂ, ಅವನು ಬಿಟ್ಟುಹೋದ ಪರಂಪರೆ ದೊಡ್ಡದು.



ಅವನು ತನ್ನ ಜೀವಿತಾವಧಿಯಲ್ಲಿ ಅನೇಕ ಆನೆಗಳಿಗೆ ಅಪ್ಪನಾಗಿದ್ದ. ಅವನ ಬಲಿಷ್ಠವಾದ ದಂತಗಳ ಗುಣಲಕ್ಷಣಗಳನ್ನು ಹೊಂದಿರುವ ಮುಂದಿನ ಪೀಳಿಗೆಯ ಆನೆಗಳು ಅಂಬೋಸೆಲಿಯಲ್ಲಿ ಈಗಲೂ ಇವೆ. ಆನೆಗಳ ದಂತದ ವ್ಯಾಪಾರ ಎಷ್ಟು ಅಪಾಯಕಾರಿ ಮತ್ತು ಅವುಗಳನ್ನು ಸಂರಕ್ಷಿಸುವುದು ಸಮಾಜಕ್ಕೆ ಎಷ್ಟು ಲಾಭ ಎಂಬ ಅರಿವನ್ನು ಕ್ರೇಗ್ ಮೂಡಿಸಿದ್ದ. ಆತ ಆಫ್ರಿಕಾದ ಕಾಡುಗಳ ಕೊನೆಯ ದೈತ್ಯನಂತೆ ಬದುಕಿದ.

ಅವನ ಕಥೆಯು ನಮಗೆ ಪ್ರಕೃತಿಯ ಮೇಲಿನ ಗೌರವ ಮತ್ತು ವನ್ಯಜೀವಿ ಸಂರಕ್ಷಣೆಯ ಮಹತ್ವವನ್ನು ಸದಾ ನೆನಪಿಸುತ್ತದೆ. ಇಂದು ಅಂಬೋಸೆಲಿಯಲ್ಲಿ ಕೇವಲ ಒಂಬತ್ತು ಸೂಪರ್ ಟಸ್ಕರ್‌ಗಳು ಉಳಿದಿದ್ದು, ಅವುಗಳನ್ನು ರಕ್ಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಕ್ರೇಗ್ ನ ಸಹಜ ಸಾವಿನ ನಂತರ, ಕೀನ್ಯಾ ಸರಕಾರವು ಅವನ ದಂತಗಳ ಸುರಕ್ಷತೆಗೆ ಆದ್ಯತೆ ನೀಡಲು ತೀರ್ಮಾನಿಸಿದೆ. ಕಾನೂನಿನ ಪ್ರಕಾರ, ಅತಿ ಮೌಲ್ಯಯುತವಾದ ಇಂಥ ದಂತಗಳನ್ನು ಕಾಡಿನಲ್ಲಿ ಬಿಡುವಂತಿಲ್ಲ. ರೇಂಜರ್‌ಗಳು ತಕ್ಷಣವೇ ಆ ದಂತಗಳನ್ನು ಸುರಕ್ಷಿತವಾಗಿ ಹೊರತೆಗೆದು ಕೀನ್ಯಾ ವನ್ಯಜೀವಿ ಸೇವೆಯ ಕೇಂದ್ರ ಕಚೇರಿಗೆ ರವಾನಿಸಿದ್ದಾರೆ.

ಕ್ರೇಗ್‌ನ ಈ ಅಪರೂಪದ ದಂತಗಳನ್ನು ಸುಟ್ಟುಹಾಕುವ ಬದಲು, ಶೈಕ್ಷಣಿಕ ಮತ್ತು ಸಂರಕ್ಷಣಾ ಅರಿವು ಮೂಡಿಸಲು ಯಾವುದಾದರೂ ರಾಷ್ಟ್ರೀಯ ಮ್ಯೂಸಿಯಂನಲ್ಲಿ ಸಂರಕ್ಷಿಸಿಡುವ ಸಾಧ್ಯತೆಯಿದೆ. ಇದು ಮುಂದಿನ ಪೀಳಿಗೆಗೆ ಆನೆಗಳ ಸಂರಕ್ಷಣೆಯ ಮಹತ್ವವನ್ನು ಸಾರಲಿದೆ.

ಕ್ರೇಗ್ 54 ವರ್ಷಗಳ ಕಾಲ ಸುದೀರ್ಘವಾಗಿ ಬದುಕಲು ಈ ವ್ಯವಸ್ಥಿತ ರಕ್ಷಣಾ ತಂತ್ರವೇ ಕಾರಣವಾಯಿತು. ಆತನ ಸಾವಿನ ನಂತರವೂ, ಇದೇ ತಂತ್ರಜ್ಞಾನವನ್ನು ಆತನ ವಂಶಸ್ಥರಾದ ಇತರ ಸಣ್ಣ ಟಸ್ಕರ್‌ಗಳ ರಕ್ಷಣೆಗೆ ಬಳಸಲಾಗುತ್ತಿದೆ. ಕ್ರೇಗ್ ನೈಸರ್ಗಿಕವಾಗಿ ಮರಣ ಹೊಂದಿದ್ದು ಸಂರಕ್ಷಣಾ ಲೋಕದ ದೊಡ್ಡ ಗೆಲುವು. ಸಾಮಾನ್ಯವಾಗಿ ಇಷ್ಟು ದೊಡ್ಡ ದಂತವಿರುವ ಆನೆಗಳನ್ನು ಬೇಟೆಗಾರರು ಗುಂಡಿಕ್ಕಿ ಕೊಲ್ಲುತ್ತಾರೆ. ಆದರೆ ಕ್ರೇಗ್ ವೃದ್ಧಾಪ್ಯದವರೆಗೂ ಬದುಕಿದ್ದು, ದಂತದ ವ್ಯಾಪಾರಕ್ಕೆ ಕೀನ್ಯಾ ನೀಡುತ್ತಿರುವ ಪ್ರಬಲ ಏಟಿಗೆ ಸಾಕ್ಷಿಯಾಗಿದೆ.

ಕ್ರೇಗ್‌ನ ದಂತಗಳು ಕೇವಲ ಸೌಂದರ್ಯದ ವಸ್ತುಗಳಲ್ಲ, ಅವು ಮಾನವನ ಕ್ರೌರ್ಯದ ನಡುವೆಯೂ ಪ್ರಕೃತಿಯನ್ನು ಹೇಗೆ ಉಳಿಸಬಹುದು ಎಂಬುದರ ಪ್ರತೀಕವಾಗಿದೆ. ಅವನ ದಂತಗಳನ್ನು ಸಂರಕ್ಷಿಸುವ ಮೂಲಕ, ಆನೆ ಬದುಕಿದ್ದರೆ ಅದರ ಮೌಲ್ಯ, ಸತ್ತಾಗಿನ ದಂತಕ್ಕಿಂತ ಸಾವಿರ ಪಟ್ಟು ಹೆಚ್ಚು ಎಂಬ ಸಂದೇಶವನ್ನು ಜಗತ್ತಿಗೆ ಸಾರಲಾಗುತ್ತಿದೆ.

ಪ್ರಾಣಿಗಳನ್ನು ರಕ್ಷಿಸುವಲ್ಲಿ ಸ್ಥಳೀಯ ಸಮುದಾಯಗಳ ಪಾತ್ರ ಎಷ್ಟು ದೊಡ್ಡದು ಎಂಬು ದಕ್ಕೆ ಕ್ರೇಗ್ ಬದುಕಿದ್ದ ಹಾದಿಯೇ ಸಾಕ್ಷಿ.

**- ವಿಶ್ವೇಶ್ವರ** ಭಟ್

# ಭಾವ ಲಹರಿ

## ಸಾಮಾಜಿಕ ಸಂಬಂಧಗಳು

ಈ ಅಗಾಧ ವಿಶ್ವದಲ್ಲಿ ಮಾನವ ಮಾನವರನ್ನು ಒಬ್ಬರಿಗೊಬ್ಬರು ಬೆಸೆದಿರುವುದು ಹಲವಾರು ರೀತಿಯ ಸಾಮಾಜಿಕ ಸಂಬಂಧಗಳು, ಈ ಸಂಬಂಧಗಳ ಬೆಸುಗೆಯಿಲ್ಲದಿದ್ದರೆ ಮಾನವನೂ ಪ್ರಾಣಿಗಳಂತೆ ಮನ ಬಂದಲ್ಲಿ ಅಲೆಯುತ್ತಿದ್ದ, ಮೇಯುತ್ತಿದ್ದ. ಮಾನವ ಈ ಸಾಮಾಜಿಕ ಸಂಬಂಧಗಳೆನ್ನುವ ಸಂಕೋಲೆಗಳ ಒಳಗೆ ಸಿಕ್ಕಿಬಿದ್ದಿರುವ ಸಾಮಾಜಿಕ ಜೀವಿ ಎಂದರೆ ತಪ್ಪಾಗಲಾರದು. ಈ ಸಂಬಂಧಗಳ ಆಯಸ್ಕಾಂತ ಶಕ್ತಿಯಿಲ್ಲದಿದ್ದರೆ ಮಾನವನನ್ನು ಒಂದು ಕಡೆ ಹಿಡಿದು ನಿಲ್ಲಿಸುವುದು ಕಷ್ಟವಾಗುತ್ತಿತ್ತು. ಬೇಕಿದ್ದರೂ ಬೇಡವಾದರೂ ಮಾನವ ಈ ಸಂಕೋಲೆಗಳ ಬಂಧನದಲ್ಲಿ ಬದುಕಲೇಬೇಕಾದ ಅನಿವಾರ್ಯತೆ ಇದೆ.

ಮಾನವ ಮಾನವರೊಳಗಿನ ಈ ಸಂಬಂಧಗಳನ್ನು ಮೂರು ವಿಭಾಗಗಳನ್ನಾಗಿ ವಿಭಜಿಸಬಹುದು.

1. ರಕ್ತ ಸಂಬಂಧಗಳು
2. ಮಾನವೀಯ ಸಂಬಂಧಗಳು
3. ವ್ಯವಹಾರಿಕ ಸಂಬಂಧಗಳು

ರಕ್ತ ಸಂಬಂಧಗಳಿಗೆ ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಇವು ಬೇಕೆಂದಾಗ ಜೋಡಿಸಿಕೊಂಡು ಬೇಡವೆಂದಾಗ ಕಿತ್ತೆಸೆಯಲಾಗುವಂತಹ ಸಂಬಂಧಗಳಲ್ಲ; ಹುಟ್ಟಿನಿಂದ ಸಾವಿನವರೆಗೂ ಈ ಸಂಬಂಧಗಳನ್ನು ನಿರ್ವಹಿಸಲೇಬೇಕಾದ ಶಾಶ್ವತವಾದ ಸಂಬಂಧಗಳು. ಮೊದಲೆಲ್ಲಾ ರಕ್ತ ಸಂಬಂಧಿಗಳು ಅವಿಭಾಜ್ಯ ಕುಟುಂಬವಾಗಿ ಒಂದೇ ಮಾಡಿನಡಿಯಲ್ಲಿ ಜೀವಿಸುತ್ತಿದ್ದರು. ಕ್ರಮೇಣ ಇದು ಶಿಥಿಲವಾಗುತ್ತಾ ಬಂದು ಈಗ ತಂದೆ-ತಾಯಿ, ಮಕ್ಕಳು ಮಾತ್ರ ಒಟ್ಟಿಗೆ ನಿಲ್ಲುವ ಮಟ್ಟಕ್ಕೆ ಬಂದು ನಿಂತಿವೆ. ಮೊದಲಿನ ಏಕತ್ವ ಏನಿತ್ತೋ ಅದು ಮಾಯವಾಗಿ ಅಲ್ಲಿ ಈಗ ಸ್ವಾರ್ಥ ಮನೋಭಾವ ತುಂಬಿ ನಿಂತಿದೆ. ಚಿಕ್ಕ ಕುಟುಂಬ ಸುಖಕ್ಕೆ ಆಧಾರವೆನ್ನುವ ಮಾತು ಹೊರನೋಟಕ್ಕೆ ಆಕರ್ಷಣೀಯವಾಗಿ ಕಂಡರೂ ಆಳವಾಗಿ ಯೋಚಿಸಿದರೆ ಮೊದಲಿನ ಸಹಕಾರ, ಸಹಬಾಳ್ವೆ, ತ್ಯಾಗ, ಆತ್ಮೀಯತೆ ಮಾಯವಾಗಿ ಮಾನಸಿಕವಾಗಿ ಬಡತನವನ್ನು ಅನುಭವಿಸುತ್ತಿದ್ದೇವೆ ಎನ್ನುವುದು ಸ್ಪಷ್ಟವಾಗುತ್ತದೆ.

ರಕ್ತ ಸಂಬಂಧಗಳ ಹೊರಗಿನ ಮಾನಸಿಕ ಸಂಬಂಧಗಳು ಮಾನವೀಯ ಸಂಬಂಧಗಳು, ಗಂಡ-ಹೆಂಡತಿ, ಗೆಳೆಯರು, ನೆರೆ-ಕರೆಯವರು, ಸಹೋದ್ಯೋಗಿಗಳು, ಗುರು-ಶಿಷ್ಯರು ಇವೆಲ್ಲಾ ಮಾನಸಿಕವಾಗಿ ಬೆಳೆದು ಬರುವ ಸಂಬಂಧಗಳು. ಇಲ್ಲಿ ಖಚಿತವಾದ, ಗಟ್ಟಿಯಾಗಿ ನಿಲ್ಲುವ ರಕ್ತ ಸಂಬಂಧವಿಲ್ಲ. ಆದರೆ ಇಲ್ಲಿ ಎರಡು ಹೃದಯಗಳು ಬೆಸೆದಾಗ ರಕ್ತ ಸಂಬಂಧದಷ್ಟೇ ಗಟ್ಟಿಯಾದ ಬಂಧನ ಏರ್ಪಡುವುದು ಸಾಧ್ಯ. ಮಾನವೀಯತೆಗೆ ಒರೆಗಲ್ಲು ಈ ಸಂಬಂಧಗಳು. ಬೆರೆತಷ್ಟೇ ಸುಲಭದಲ್ಲಿ ಕಡಿದು ಹೋಗುವುದೂ ಸಾಧ್ಯ. ಇವತ್ತಿನ ಆತ್ಮೀಯ ಗೆಳೆಯರು ನಾಳಿನ ವೈರಿಗಳೂ ಆಗಬಹುದು. ಗಂಡ-ಹೆಂಡತಿಯರು ಉತ್ತರ ದಕ್ಷಿಣಕ್ಕೆ ಮುಖಹಾಕಿ ನಿಲ್ಲಬಹುದು. ನೆರೆ-ಕರೆಯವರಲ್ಲಿ ಇರಬೇಕಾದ ಆತ್ಮೀಯತೆಯ ಜಾಗದಲ್ಲಿ ವೈಷಮ್ಯ, ಅಸೂಯೆ ಬೆಳೆದು ನಿಲ್ಲಬಹುದು. ಒಂದುಗೂಡಿದ ಮಾನಸಿಕ ಕೊಂಡಿಗಳು ಹೇಗೆ ಎಲ್ಲಿ ಕಳಚಿಕೊಳ್ಳುವುವು ಎಂದು ಹೇಳುವುದೂ ಅಸಾಧ್ಯ. ಒಮ್ಮೆ ಬೆಸೆದ ಮಾನಸಿಕ ಕೊಂಡಿಗಳು ಭದ್ರವಾಗಿ ನಿಲ್ಲುವುದು ಅಥವಾ ಕಳಚಿಕೊಳ್ಳುವುದು ಅವರವರ ವ್ಯಕ್ತಿತ್ವದ ಮೇಲೆ ಹೊಂದಿಕೊಂಡಿರುತ್ತದೆ. ವ್ಯಕ್ತಿತ್ವದಿಂದ ವ್ಯಕ್ತಿತ್ವಕ್ಕೆ ಈ ಸಂಬಂಧಗಳ ಭಾವನೆಗಳು ಬದಲಾಗುತ್ತಾ ಹೋಗುತ್ತವೆ. ವ್ಯಕ್ತಿತ್ವವನ್ನು ಒಂದು ಕಟ್ಟುನಿಟ್ಟುನೊಳಗೆ ನಿಗದಿಪಡಿಸಿಡುವುದೂ ಸಾಧ್ಯವಿಲ್ಲ. ಯಾಕೆಂದರೆ ಅದು ಜಾಗದಿಂದ ಜಾಗಕ್ಕೆ, ದೇಶದಿಂದ ದೇಶಕ್ಕೆ, ಪರಿಸರದಿಂದ ಪರಿಸರಕ್ಕೆ, ಪಂಗಡದಿಂದ ಪಂಗಡಕ್ಕೆ ಬದಲಾಗುತ್ತದೆ.

ಉದಾಹರಣೆಗೆ ನಮ್ಮಲ್ಲಿ ಪ್ರೀತಿ, ಸತ್ಯ, ಶಾಂತಿ, ಸಹನೆ, ತ್ಯಾಗ ಅಹಿಂಸೆಗೆ ಹೆಚ್ಚಿನ ಒತ್ತುಕೊಟ್ಟು ಒಬ್ಬನ ವ್ಯಕ್ತಿತ್ವವನ್ನು ಅಳೆಯುತ್ತಾರೆ. ಆದರೆ ಪಾಶ್ಚಾತ್ಯರಲ್ಲಿ ಇವೆಲ್ಲ ಭಾವನೆಗಳಿಗೆ ಹೆಚ್ಚಿನ ಒತ್ತು ಇಲ್ಲ. ಅವರದ್ದು ತುಂಬಾ ವ್ಯವಹಾರಿಕ ಮನೋಭಾವ. ಎಲ್ಲದಕ್ಕೂ ಒಂದೊಂದು ಮಿತಿಯನ್ನು ಹಾಕಿಕೊಂಡು ತನ್ನ ಉನ್ನತಿಗೆ ತನ್ನ ಪ್ರಗತಿಗೆ ಹೆಚ್ಚಿನ ಬೆಲೆ ಕೊಡುತ್ತಾರೆ. ನಾವೋ ಮಹಾಭಾವುಕರು, ಸಹನೆ ಸಹನೆಯೆಂದು ಯಾವ ಚಿತ್ರಹಿಂಸೆಗೂ ಒಳಗಾಗುವ ಎದೆಗಾರಿಕೆ ನಮ್ಮಲ್ಲಿದೆ. ತ್ಯಾಗ ತ್ಯಾಗವೆಂದು ಎಲ್ಲಾ ಕಳಕೊಂಡರೂ ತ್ಯಾಗದ ಮಂತ್ರ ಜಪಿಸುವ ಕರ್ಣನ ಜನಾಂಗದವರು ನಾವು! ಸತ್ಯ ಸತ್ಯವೆಂದು ನಮ್ಮನ್ನೆಲ್ಲ ದೋಚಿಕೊಂಡು ಹೋದರೂ ಸತ್ಯಕ್ಕೇ ಜಯವೆನ್ನುವ ಧರ್ಮರಾಯನ ವಂಶಸ್ಥರು. ಶಾಂತಿ ಶಾಂತಿಯೆಂದು ಬಿದ್ದ ಹೊಡೆತಗಳನ್ನೆಲ್ಲ ಬಾಯಿಮುಚ್ಚಿ ಸಹಿಸಿಕೊಳ್ಳುವ ಕಷ್ಟ ಸಹಿಷ್ಣುಗಳು. ಅಹಿಂಸೆ ಅಹಿಂಸೆಯೆಂದು ನಮ್ಮನ್ನು ಚಿಂದಿ ಚಿಂದಿ ಮಾಡಿದರೂ ಇನ್ನೊಬ್ಬರ ಮೇಲೆ ಕೈಯೆತ್ತಬಾರದೆಂದು ಹೇಳಿದ ಗಾಂಧಿತತ್ವ ಪರಿಪಾಲಕರು. ಹಾಗಾಗಿ ನಮ್ಮ ಮಾನವೀಯ ಸಂಬಂಧಗಳು ಪಾಶ್ಚಾತ್ಯರ ವ್ಯವಹಾರಿಕ ಸಂಬಂಧಗಳಾಗಿ ಬದಲಾಗುವುದು ಅಸಾಧ್ಯ. ನಮ್ಮಲ್ಲಿ ಪತಿ-ಪತ್ನಿಯ ಸಂಬಂಧಕ್ಕೆ ಹೆಚ್ಚಿನ ಬೆಲೆಯಿದೆ. ಯಾವ ತ್ಯಾಗವನ್ನಾದರೂ ಮಾಡಿ ಈ ಸಂಬಂಧದ ರಕ್ಷಣೆಗೆ ನಾವು ಹೆಣಗುತ್ತೇವೆ. ಅಲ್ಲಿ ಈ ಸಂಬಂಧದಲ್ಲಿ ಒಮ್ಮೆ ಬಿರುಕು ಬಿಟ್ಟಿತೆಂದರೆ ಮತ್ತೆ ಪರ್ಯಾವಸಾನವಾಗುವುದು ಡೈವೋರ್ಸಿನಲ್ಲಿ. ಪತ್ತೆ ಹಾಕುವ ಪ್ರಯತ್ನ ಅವರು ಮಾಡಲಾರರು. ಆದರೆ ಪಾಶ್ಚಾತೀಕರಣದ ಪ್ರಭಾವ ನಮ್ಮ ಮೇಲೂ ಆಗುತ್ತಿದ್ದು, ಈಗ ನಮ್ಮ ಮಾನವೀಯ ಸಂಬಂಧಗಳ ಇಕ್ವೇಶನ್ ಬದಲಾಗುತ್ತಿದೆ ಎನ್ನುವುದೂ ಸತ್ಯ.

ಗೆಳೆತನ ಇನ್ನೊಂದು ಅತಿ ಸೂಕ್ಷ್ಮವಾದ ಮಾನಸಿಕ ಸಂಬಂಧ. ಮದುವೆಯಂತೆ ನಿಜವಾದ ಗೆಳೆತನ ಸ್ವರ್ಗದಲ್ಲೇ ಮಾಡಿರುವುದು ಎಂದರೆ ತಪ್ಪಾಗದು. ಎಲ್ಲರೊಂದಿಗೆ ಗೆಳೆತನ ಸ್ಫುರಿಸಿ ಬರುವುದಿಲ್ಲ. ಕೆಲವೇ ವ್ಯಕ್ತಿಗಳ ಮಧ್ಯೆ ನಿಜವಾದ ಗೆಳೆತನದ ಅಯಸ್ಕಾಂತ ಆಕರ್ಷಣೆ ಬೆಳೆದು ಬರುತ್ತದೆ. ಇಡೀ ಜೀವಮಾನದಲ್ಲಿ ಒಬ್ಬರೋ, ಇಬ್ಬರೋ ನಿಜವಾದ ಗೆಳೆಯರು ಸಿಕ್ಕಿದರೆ ಹೆಚ್ಚು. ನೆರೆ-ಕರೆಯ ಸಂಬಂಧ ಗೆಳೆತನದ ಸಂಬಂಧವಾಗಲಾರದು. ಅದೊಂದು ಒತ್ತಾಯದ ಸಂಬಂಧ. ಒಂದೇ ರೀತಿಯ ವ್ಯಕ್ತಿತ್ವ, ಒಂದೇ ಅನಿಸಿಕೆಗಳು, ಯಾವುದೇ ಪರಿಸರಕ್ಕೆ ಒಂದೇ ರೀತಿಯ ಪ್ರತಿಕ್ರಿಯೆಗಳು ಗೆಳೆತನಕ್ಕೆ ಮೂಲ ಆಕರ್ಷಣೆಗಳು ಎನ್ನಬಹುದು.

ಗುರು-ಶಿಷ್ಯರೊಳಗಿನ, ಸಹೋದ್ಯೋಗಿಗಳ ನಡುವಿನ ಸಂಬಂಧದಲ್ಲಿ ಸಿಹಿಯೂ ಇರಬಹುದು, ಕಹಿಯೂ ಇರಬಹುದು. ನೂರಾರು ಸಾವಿರಾರು ಜನರೊಡನೆ ವ್ಯವಹರಿಸುವಾಗ ಎಲ್ಲರನ್ನೂ ಮೆಚ್ಚಿಸುವುದು ಅಥವಾ ಎಲ್ಲರೊಡನೆ ಆತ್ಮೀಯವಾಗಿ ವರ್ತಿಸುವುದು ಕಷ್ಟ. ಯಾಕೆಂದರೆ ದೈಹಿಕವಾಗಿಯಾಗಲೀ, ಮಾನಸಿಕವಾಗಿಯಾಗಲೀ, ಗುಣದಲ್ಲಾಗಲೀ, ಒಬ್ಬೊಬ್ಬರದ್ದು ಒಂದೊಂದು ತರಹ. ಕೆಲವು ಕಡೆ ಹೊಂದಾಣಿಕೆ ಸಾಧ್ಯವಾಗದಷ್ಟು ವ್ಯತ್ಯಾಸಗಳಿರುತ್ತವೆ. ಅಂತಹ ಸಂದರ್ಭಗಳಲ್ಲಿ ಒತ್ತಾಯದ ಮಾಘಸ್ನಾನಕ್ಕಿಂತ ಒಪ್ಪಿಗೆಯ ದೂರೀಕರಣ ಮೇಲು.

ವ್ಯವಹಾರಿಕ ಸಂಬಂಧಗಳು ಬರೇ ವ್ಯವಹಾರದ ಅವಶ್ಯಕತೆಗಳಿಗೆ ಅನುಗುಣವಾಗಿ ಬೆಸೆದುಕೊಳ್ಳುತ್ತದೆ. ಒಮ್ಮೆ ವ್ಯವಹಾರ ಮುಗಿದರೆ ಮತ್ತೆ ನಾವು ಅಂತಹ ಸಂಬಂಧಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಉದಾಹರಣೆಗೆ ಅಂಗಡಿಯಾತ, ಸಹ ಪ್ರಯಾಣಿಕರು ಇತ್ಯಾದಿ. ಇಂತಹ ಸಂಪರ್ಕಗಳಿಂದ ಬೆಳೆಯುವ ಸಂಬಂಧಗಳು ವ್ಯವಹಾರಿಕ ಸಂಬಂಧಗಳು.

ಮೇಲಿನ ಎಲ್ಲಾ ಸಂಬಂಧಗಳಲ್ಲಿ ಸ್ವಲ್ಪ ಮನಸ್ತಾಪ, ಸ್ವಲ್ಪ ಘರ್ಷಣೆ, ಸ್ವಲ್ಪ ಮನಸ್ತಾಪ ಉಂಟಾದರೆ ನಮ್ಮ ಸಂಸಾರಿಕ ಜೀವನದಲ್ಲಿ ಅದರ ಕರಿಛಾಯೆ ಬೀಳುವುದು ಸಾಧ್ಯ. ದಿನದ ಹೆಚ್ಚಿನ ಸಮಯವನ್ನು ನಾವು ಈ ಪರಿಸರದಲ್ಲಿ ಕಳೆಯಬೇಕಾಗಿರುವುದರಿಂದ ಇಲ್ಲಿಯ ಉಲ್ಲಾಸಗಳು, ನಿಷ್ಠುರಗಳು, ಸಂತಸಗಳು, ಬೇಸರಿಕೆಗಳು ನಮ್ಮ ಸಂಸಾರಿಕ ಜೀವನದ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ ಈ ಎಲ್ಲಾ ಸಂಪರ್ಕ ಸಂಬಂಧಗಳಲ್ಲಿ ಆದಷ್ಟು ಸಿಹಿ ತುಂಬುವಂತೆ ನೋಡಿಕೊಳ್ಳುವುದು ಒಳ್ಳೆಯದು.

ಅದಕ್ಕಾಗಿ ಸಾಮಾಜಿಕ ಸಂಬಂಧಗಳ ಅರ್ಥ ತಿಳಿದುಕೊಳ್ಳುವುದು ಬಹಳ ಮುಖ್ಯ. ಈ ಭೂಮಿಯಲ್ಲಿ ಒಂಟಿಯಾಗಿ ಜೀವಿಸುವುದು ಅಸಾಧ್ಯ. ಯಾಕೆಂದರೆ ಸುತ್ತಲಿನವರೊಡನೆ ಒಂದಲ್ಲ ಒಂದು ರೀತಿಯ ಸಂಪರ್ಕ ಬೆಳೆಸಲೇಬೇಕಾಗುತ್ತದೆ. ಪ್ರತಿಯೊಂದು ಸಂಬಂಧಗಳನ್ನು ಸರಿಯಾಗಿ ತಿಳಿದುಕೊಂಡು ನಿಭಾಯಿಸಿದರೆ ಎಲ್ಲೂ ಅಪಸ್ವರಬಾರದು.

ಎಲ್ಲ ಸಂಬಂಧಗಳು ಒಂದು ಮಾನಸಿಕ ಮಟ್ಟದಲ್ಲಿ ಬೆಳೆದು ನಿಲ್ಲಬೇಕು. ಇಲ್ಲಿ ಒಂದು ರೀತಿಯ ಕೊಟ್ಟು ಕೊಂಬುವ ನೀತಿಯನ್ನು ಅನುಸರಿಸಬೇಕಾಗುತ್ತದೆ. ಒಂದು ಕಡೆ ಸ್ವಲ್ಪ ಕಳೆದುಕೊಂಡರೆ ಮತ್ತೊಂದು ಕಡೆ ಸ್ವಲ್ಪ ಪಡೆದುಕೊಳ್ಳಬಹುದು. ಮನುಷ್ಯನಲ್ಲಿ ನೆಲೆಸಿರುವ ಅಹಂ ಯಾವುದೇ ರೀತಿಯ ಸಂಬಂಧಗಳಿಗೆ ವಿನಾಶಕಾರಿ. ಸಂಬಂಧಗಳು ಸರಿಯಾಗಿರಬೇಕಾದರೆ ಆದಷ್ಟು ಅಹಂನಿಂದ ಮುಕ್ತರಾಗಬೇಕು.

ಒತ್ತಾಯದಿಂದ ಯಾವುದೇ ಸಂಬಂಧಗಳನ್ನು ಹೇರಲಾಗದು. ಸಹಜ ಪ್ರತಿಕ್ರಿಯೆಯಾಗಿ ಅದು ತನ್ನಿಂದ ತಾನೇ ಮೂಡಿ ಬರಬೇಕು. ವ್ಯವಹಾರಿಕ ಸಂಬಂಧಗಳಲ್ಲಿ ನಾವು ಭಾವುಕರಾಗಬಾರದು. ಆದಷ್ಟು ನಿರ್ಲಿಪ್ತರಾಗಬೇಕು.

ಯಾವುದೇ ಸಂಬಂಧಗಳ ಅಡಿಗಲ್ಲು ನಂಬುಗೆಯಾಗಿರಬೇಕು. ನಂಬುಗೆಯಿಲ್ಲದ ಸಂಬಂಧಕ್ಕೆ ಅರ್ಥವಿಲ್ಲ. ಪರಿಸರಗಳನ್ನು ಅರ್ಥೈಸಿ ಕೊಂಡು ಸಂಪರ್ಕ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕು. ಹೆಚ್ಚುಹೆಚ್ಚು ಸಿಕ್ಕಿ ಹಾಕಿಕೊಂಡಷ್ಟು ತಲೆಬಿಸಿಗಳು ಜಾಸ್ತಿ.

ಆದಷ್ಟು ಬೇರೆ ಬೇರೆ ರೀತಿಯ ಸಂಬಂಧಗಳನ್ನು ಬೇರೆ ಬೇರೆಯಾಗಿಯೇ ಇಡಬೇಕು. ಉದಾಹರಣೆಗೆ ಗೆಳೆತನದೊಂದಿಗೆ ವ್ಯವಹಾರವನ್ನು ಮೇಳೈಸಬಾರದು. ಗೆಳೆತನ ಗೆಳೆತನವಾಗುಳಿದರೇ ಚೆನ್ನ.

ನಮ್ಮಲ್ಲಿ ಹಲವರಿಗೆ ಹಲವಾರು ರೀತಿಯ ಸಂಬಂಧಗಳ ಈ ಗೊಡವೆ ಇರುವುದಿಲ್ಲ. ಎಲ್ಲಿ ನೋಡಿದರೂ ವೈಷಮ್ಯ ಬೆಳೆಸಿಕೊಳ್ಳುತ್ತಾರೆ. ಒಂದು ರೀತಿಯ ಕೂಪ ಮಂಡೂಕ ಪ್ರವೃತ್ತಿ ಅವರದ್ದು. ವಿಸ್ತಾರವಾದ ಮನೋಭಾವದಲ್ಲಿ ಅವರೆಂದೂ ಯೋಚಿಸುವುದಿಲ್ಲ. ತಾನು ತನ್ನದು, ತಾನು ಹೇಳಿದ್ದು, ತಾನು ಮಾಡಿದ್ದು ಎನ್ನುವ ಸಂಕುಚಿತ ಮನೋಭಾವನೆ ಇದ್ದರೆ ಯಾವ ರೀತಿಯ ಸಂಬಂಧಗಳೂ ನಯವಾಗಿ ಮುಂದುವರಿಯುವುದಿಲ್ಲ. ಅಂತಹವರು ತಾವೂ ಸುಖವಾಗಿರೋದಿಲ್ಲ ಇತರರನ್ನೂ ಸುಖವಾಗಿರಲು ಬಿಡೋದಿಲ್ಲ.


ನಮ್ಮ ಪರಿಸರವನ್ನು, ನಾವಿರುವ ಸಮಾಜವನ್ನು ಬಿಟ್ಟು ಬದುಕುವುದು ಸಾಧ್ಯವೇ ಇಲ್ಲವೆಂದಾದ ಮೇಲೆ ಸಂಬಂಧಗಳು ನಯವಾಗಿರಲು ಪ್ರಯತ್ನಿಸಿದರೆ ಜೀವನದಲ್ಲಿ ನೆಮ್ಮದಿ ನೆಲೆಸುವುದು ಸಾಧ್ಯ. ಎಲ್ಲರ ಜೀವನದ ಧ್ಯೇಯವೇ ನೆಮ್ಮದಿ. ಸ್ವಲ್ಪ ಕಳಕೊಂಡು ಸ್ವಲ್ಪ ಪಡಕೊಂಡು ಆ ನೆಮ್ಮದಿಯನ್ನು ಕಾಯ್ದುಕೊಂಡು ಜೀವಿಸುವುದು ಒಳಿತಲ್ಲವೇ?



### ವ್ಯಕ್ತಿತ್ವವನ್ನು ಒಂದು ಕಟ್ಟುನಿಟ್ಟುನೊಳಗೆ ನಿಗದಿಪಡಿಸಿಡುವುದೂ ಸಾಧ್ಯವಾ?

- ನಮ್ಮಲ್ಲಿ ಪ್ರೀತಿ, ಸತ್ಯ, ಶಾಂತಿ, ಸಹನೆ, ತ್ಯಾಗ ಅಹಿಂಸೆಗೆ ಹೆಚ್ಚಿನ ಒತ್ತುಕೊಟ್ಟು ಒಬ್ಬನ ವ್ಯಕ್ತಿತ್ವವನ್ನು ಅಳೆಯುತ್ತಾರೆ.
- ಪಾಶ್ಚಾತ್ಯರಲ್ಲಿ ಇವೆಲ್ಲ ಭಾವನೆಗಳಿಗೆ ಹೆಚ್ಚಿನ ಒತ್ತು ಇಲ್ಲ.
- ಅವರದ್ದು ತುಂಬಾ ವ್ಯವಹಾರಿಕ ಮನೋಭಾವ.
- ಎಲ್ಲದಕ್ಕೂ ಒಂದೊಂದು ಮಿತಿಯನ್ನು ಹಾಕಿಕೊಂಡು ತನ್ನ ಉನ್ನತಿಗೆ ತನ್ನ ಪ್ರಗತಿಗೆ ಹೆಚ್ಚಿನ ಬೆಲೆ ಕೊಡುತ್ತಾರೆ.
- ನಾವೋ ಮಹಾಭಾವುಕರು, ಸಹನೆ ಸಹನೆಯೆಂದು ಯಾವ ಚಿತ್ರಹಿಂಸೆಗೂ ಒಳಗಾಗುವ ಎದೆಗಾರಿಕೆ ನಮ್ಮಲ್ಲಿದೆ.
- ತ್ಯಾಗ ತ್ಯಾಗವೆಂದು ಎಲ್ಲಾ ಕಳಕೊಂಡರೂ ತ್ಯಾಗದ ಮಂತ್ರ ಜಪಿಸುವ ಕರ್ಣನ ಜನಾಂಗದವರು ನಾವು!
- ಸತ್ಯ ಸತ್ಯವೆಂದು ನಮ್ಮನ್ನೆಲ್ಲ ದೋಚಿಕೊಂಡು ಹೋದರೂ ಸತ್ಯಕ್ಕೇ ಜಯವೆನ್ನುವ ಧರ್ಮರಾಯನ ವಂಶಸ್ಥರು.
- ಶಾಂತಿ ಶಾಂತಿಯೆಂದು ಬಿದ್ದ ಹೊಡೆತಗಳನ್ನೆಲ್ಲ ಬಾಯಿಮುಚ್ಚಿ ಸಹಿಸಿಕೊಳ್ಳುವ ಕಷ್ಟ ಸಹಿಷ್ಣುಗಳು.
- ಅಹಿಂಸೆ ಅಹಿಂಸೆಯೆಂದು ನಮ್ಮನ್ನು ಚಿಂದಿ ಚಿಂದಿ ಮಾಡಿದರೂ ಇನ್ನೊಬ್ಬರ ಮೇಲೆ ಕೈಯೆತ್ತಬಾರದೆಂದು ಹೇಳಿದ ಗಾಂಧಿತತ್ವ ಪರಿಪಾಲಕರು.
- ನಮ್ಮ ಮಾನವೀಯ ಸಂಬಂಧಗಳು ಪಾಶ್ಚಾತ್ಯರ ವ್ಯವಹಾರಿಕ ಸಂಬಂಧಗಳಾಗಿ ಬದಲಾಗುವುದು ಅಸಾಧ್ಯ.
- ನಮ್ಮಲ್ಲಿ ಪತಿ-ಪತ್ನಿಯ ಸಂಬಂಧಕ್ಕೆ ಹೆಚ್ಚಿನ ಬೆಲೆಯಿದೆ.
- ಯಾವ ತ್ಯಾಗವನ್ನಾದರೂ ಮಾಡಿ ಈ ಸಂಬಂಧದ ರಕ್ಷಣೆಗೆ ನಾವು ಹೆಣಗುತ್ತೇವೆ.
- ಈ ಸಂಬಂಧದಲ್ಲಿ ಒಮ್ಮೆ ಬಿರುಕು ಬಿಟ್ಟಿತೆಂದರೆ ಮತ್ತೆ ಪರ್ಯಾವಸಾನವಾಗುವುದು ಡೈವೋರ್ಸಿನಲ್ಲಿ.
- ಪತ್ತೆ ಹಾಕುವ ಪ್ರಯತ್ನ ಅವರು ಮಾಡಲಾರರು.
- ಪಾಶ್ಚಾತೀಕರಣದ ಪ್ರಭಾವ ನಮ್ಮ ಮೇಲೂ ಆಗುತ್ತಿದ್ದು, ಈಗ ನಮ್ಮ ಮಾನವೀಯ ಸಂಬಂಧಗಳ ಇಕ್ವೇಶನ್ ಬದಲಾಗುತ್ತಿದೆ ಎನ್ನುವುದೂ ಸತ್ಯ.

## ಸ್ಟಿಫನ್ ಹಾಕಿಂಗ್: ವಿಶ್ವ ಉಗಮದ ರಹಸ್ಯ ತಿಳಿಸಿದ್ದ ವಿಜ್ಞಾನಿ



**ನರ ಸಂಬಂಧಿ ಕಾಯಿಲೆಗೆ ತುತ್ತಾಗಿ, ಸರಿಯಾಗಿ ಚಲಿಸಲು, ವೀಕ್ಷಿಸಲು, ಕೇಳಲು, ಮಾತನಾಡಲು ಆಗದೇ ತನ್ನ ಇಡೀ ಜೀವನವನ್ನೆಲ್ಲಾ ಗಾಲಿ ಕುರ್ಚಿಯ ಮೇಲೆ ಕುಳಿತು ಕಳೆದ, ಖ್ಯಾತ ಸೈದ್ಧಾಂತಿಕ ಭೌತಶಾಸ್ತ್ರಜ್ಞನಾಗಿ, ಪ್ರೊಫೆಸರ್ ಆಗಿ ಜಗದ್ವಿಖ್ಯಾತಿ ಗಳಿಸಿ, ಕೇವಲ 26 ವರ್ಷಕ್ಕೆ ಮರಣ ಹೊಂದುತ್ತಾನೆಂದು ಭಾವಿಸಿದ್ದ, ವೈದ್ಯಲೋಕಕ್ಕೆ ಸವಾಲೆಸೆದು 76 ವರ್ಷ ಸಾರ್ಥಕ ಜೀವನ ನಡೆಸಿದ ಆ ಮಹಾನ್ ಚೇತನವೇ ವಿಜ್ಞಾನಿ ಸ್ಟಿಫನ್ ಹಾಕಿಂಗ್**

ವಿಜ್ಞಾನಿ ಸ್ಟಿಫನ್ ಹಾಕಿಂಗ್‌ರವರು ಹಲವು ದಶಕಗಳ ಕಾಲ ವಿಜ್ಞಾನ ಕ್ಷೇತ್ರದಲ್ಲಿ ಎರಡನೇ ಐನ್‌ಸ್ಟಿನ್ ಎನ್ನಬಹುದಾದ ಮಟ್ಟಿಗೆ ತಮ್ಮ ಬುದ್ಧಿಮತ್ತೆಯಿಂದ ಹೆಸರು ವಾಸಿಯಾದರು. ಮೊನ್ನೆ(ಜನವರಿ 8) ಸ್ಟಿಫನ್ ಹಾಕಿಂಗ್‌ರ ಜನ್ಮಸ್ಮರಣೆ.

ಈ ವಿಶ್ವ ಹೇಗೆ ಉಗಮವಾಯಿತು? ಎಂಬ ಪ್ರಶ್ನೆಗೆ ಅವರು, ಉಗಮವಾಗಲಿಲ್ಲ, ಅದು ಅಲ್ಲಿಯೇ ಇದೆ ಎಂದು ಚುರುಕಾಗಿ ಉತ್ತರಿಸಿದ್ದರು. ಹಾಗಾದರೆ ವಿಶ್ವದ ಆದಿ ಹೇಗೆ? ಅಂತ್ಯ ಹೇಗೆ? ಎಂಬಿತ್ಯಾದಿ ಪ್ರಶ್ನೆಗಳು ಆಗ ದಿನನಿತ್ಯ ಚರ್ಚೆಯಾಗುತ್ತಿದ್ದವು. ದೇವರು ಈ ವಿಶ್ವ ವನ್ನು ಸೃಷ್ಟಿಸಿ ಕಾಪಾಡುತ್ತಿದ್ದಾನೆ ಎನ್ನುವುದಕ್ಕೂ ವಿಶ್ವಕ್ಕೆ ಒಂದು ಆದಿ, ಅಂತ್ಯವಿದೆ ಎನ್ನುವುದಕ್ಕೂ ಸಂಬಂಧವಿಲ್ಲ, ವೃತ್ತಕ್ಕೆ ಆದಿ-ಅಂತ್ಯಗಳಿಲ್ಲ ಎನ್ನುವುದಕ್ಕೂ ಅದರ ರಚನೆಗೂ ಸಂಬಂಧವಿಲ್ಲ. ವೃತ್ತ ರಚಿಸುವಾಗ ಆದಿ ಅಂತ್ಯಗಳಿದ್ದವು, ರಚಿಸಿದ ಮೇಲೆ? ಹಾಗಾದರೆ ವೃತ್ತವನ್ನು ರಚಿಸಿದವರಾರು? ಅವರು ಈ ರೀತಿ ತರ್ಕಬದ್ಧವಾದ ಮರು ಪ್ರಶ್ನೆ ಮಾಡುತ್ತ ತಮ್ಮ ಬೆಂಬಲಿಗರು, ವಿದ್ಯಾರ್ಥಿಗಳು, ವಿಮರ್ಶಕರನ್ನು ದಂಗು ಬಡಿಸಿದ್ದರು.

ನರ ಸಂಬಂಧಿ ಕಾಯಿಲೆಗೆ ತುತ್ತಾಗಿ, ಸರಿಯಾಗಿ ಚಲಿಸಲು, ವೀಕ್ಷಿಸಲು, ಕೇಳಲು, ಮಾತನಾಡಲು ಆಗದೇ ತನ್ನ ಇಡೀ ಜೀವನವನ್ನೆಲ್ಲಾ ಗಾಲಿ ಕುರ್ಚಿಯ ಮೇಲೆ ಕುಳಿತು ಕಳೆದ, ಖ್ಯಾತ ಸೈದ್ಧಾಂತಿಕ ಭೌತಶಾಸ್ತ್ರಜ್ಞನಾಗಿ, ಪ್ರೊಫೆಸರ್ ಆಗಿ ಜಗದ್ವಿಖ್ಯಾತಿ ಗಳಿಸಿ, ಕೇವಲ 26 ವರ್ಷಕ್ಕೆ ಮರಣ ಹೊಂದುತ್ತಾನೆಂದು ಭಾವಿಸಿದ್ದ, ವೈದ್ಯಲೋಕಕ್ಕೆ ಸವಾಲೆಸೆದು 76 ವರ್ಷ ಸಾರ್ಥಕ ಜೀವನ ನಡೆಸಿದ ಆ ಮಹಾನ್ ಚೇತನವೇ ವಿಜ್ಞಾನಿ ಸ್ಟಿಫನ್ ಹಾಕಿಂಗ್.

ಈಗ ಅವರೇನಾದರೂ ಬದುಕಿದ್ದರೆ ತನ್ನ 84ನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದರು. ಸ್ಟಿಫನ್ ಹಾಕಿಂಗ್ 1942ರ ಜನವರಿ 8ರಂದು ಆಕ್ಸ್‌ಫರ್ಡ್‌ನಲ್ಲಿ ಜನಿಸಿದರು. ಅಂದು ಇಟಲಿಯ ಪ್ರಖ್ಯಾತ ವಿಜ್ಞಾನಿ ಗೆಲಿಲಿಯೋ ಗೆಲಿಲಿಯೊ ಅವರ 300ನೇ ಪುಣ್ಯತಿಥಿ ಇತ್ತು. ಆ ದಿನ ಹುಟ್ಟಿದ ಸಾವಿರಾರು ಮಕ್ಕಳ ಪೈಕಿ ನಾನೂ ಒಬ್ಬನಾದದ್ದು ಒಂದು ಆಕಸ್ಮಿಕ ಎಂದು ಸ್ಟಿಫನ್ ಹೇಳಿಕೊಂಡಿದ್ದುಂಟು.

ತಾಯಿ ಇಸೊಬೆಲ್ಲ ಹಾಗೂ ತಂದೆ ಫ್ರಾಂಕ್ ಹಾಕಿಂಗ್‌ರವರ ಮುದ್ದಿನ ಮಗನೇ ಸ್ಟಿಫನ್. ತಂದೆ ಫ್ರಾಂಕ್ ವೈದ್ಯಕೀಯ ಸಂಶೋಧನೆಗಳ ರಾಷ್ಟ್ರೀಯ ಸಂಸ್ಥೆಯಲ್ಲಿ, ಒಂದು ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದರು. ಪ್ರಾಮಾಣಿಕರಾದ ಫ್ರಾಂಕ್ ತಮಗೆ ಬರುವ ಕನಿಷ್ಟ ಸಂಬಳದಲ್ಲಿಯೇ ಜೀವನ ನಡೆಸುತ್ತಿದ್ದರು.

ಸ್ಟಿಫನ್ ಎಂಟು ವರ್ಷದವರಿದ್ದಾಗ ಅವರು ಅಲ್ಬಾನ ಎಂಬ ಒಂದು ಪುಟ್ಟ ಊರಿಗೆ ವಲಸೆ ಬಂದರು. ಅಲ್ಲಿಯೇ ಸ್ಟಿಫನ್ ಪ್ರಾಥಮಿಕ ಶಿಕ್ಷಣ ಪೂರೈಸಿದರು. ಮುಂದೆ 1962ರಲ್ಲಿ ಆಕ್ಸಫರ್ಡ್ ವಿಶ್ವ ವಿದ್ಯಾಲಯದಿಂದ ಮೂರು ವರ್ಷದ ವಿಜ್ಞಾನ ಪದವಿ ಪಡೆದರು, ನಂತರ ಕಾಸ್ಮಾಲಜಿಯಲ್ಲಿ ಪಿ.ಎಚ್.ಡಿ.ಯನ್ನೂ ಸಹ ಪೂರ್ಣಗೊಳಿಸಿದರು.

ಜೇನ್ ಜೊತೆ ವಿವಾಹವೂ ಆಯಿತು. 1963ರಲ್ಲಿ ನರಕೋಶ ಸಂಬಂಧಿ ಕಾಯಿಲೆಗೆ ತುತ್ತಾದ ಹಾಕಿಂಗ್ ಕ್ರಮೇಣ ಪಾರ್ಶ್ವವಾಯು ಪೀಡಿತರಾಗುತ್ತ ಬಂದರು. ಗುಣಪಡಿಸಲಾಗದ ಈ ಕಾಯಿಲೆಯಿಂದ ಹಾಕಿಂಗ್ ಹೆಚ್ಚು ದಿನ ಬದುಕುವುದೇ ಇಲ್ಲ ಎಂದುಕೊಂಡಿದ್ದ ವೈದ್ಯರಿಗೇ ಅಚ್ಚರಿಯಾಗುವ ಮಟ್ಟಿಗೆ ತಮ್ಮ ಮನೋಬಲದಿಂದ ಹಾಕಿಂಗ್ ಬದುಕುಳಿದರು.

ಹಲವು ದಶಕಗಳ ಕಾಲ ವಿಜ್ಞಾನ ಕ್ಷೇತ್ರಕ್ಕೆ ದುಡಿದರು. ಎರಡನೇ ಐನ್‌ಸ್ಟಿನ್ ಎನ್ನಬಹುದಾದ ಮಟ್ಟಿಗೆ ಅವರು ತಮ್ಮ ಬುದ್ಧಿವಂತಿಕೆಯಿಂದ ಹೆಸರುವಾಸಿಯಾದರು. 1975ರಲ್ಲಿ ದೇಶ ಕಾಲಗಳ ಸ್ಥೂಲ ವ್ಯವಸ್ಥೆ ಎಂಬ ಪುಸ್ತಕವನ್ನೂ ಬರೆದು ಹಾಕಿಂಗ್ ವಿಕಿರಣ ಎಂಬ ವಾದವನ್ನು ಮಂಡಿಸಿದ್ದೂ ಆಯಿತು.

ಕೇವಲ ಮೂವತ್ತೆರಡನೇ ವಯಸ್ಸಿಗೆ ಸರ್ ಬಿರುದಿನೊಂದಿಗೆ ಸರ್ ಸ್ಟಿಫನ್ ಆದರು. 1975ರಲ್ಲಿ ಅವರ ವಿಜ್ಞಾನ ಸಾಧನೆ ಪರಿಗಣಿಸಿ ಪೋಪ್ ಅವರಿಂದ ಸುವರ್ಣ ಪದಕ ಪಡೆದರು. 1979ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಲ್ಯುಕೇಸಿಯನ್ ಪ್ರೊಫೆಸರ್ ಎಂಬ ಗೌರವ ಪಡೆದರು.

ಭೌತಶಾಸ್ತ್ರದಲ್ಲಿ ಇಷ್ಟೆಲ್ಲಾ ಸಾಧನೆಗೈದರೂ ಕೊನೆಗೂ ಅವರಿಗೆ ನೊಬೆಲ್ ಪಾರಿತೋಷಕ ದೊರಕದೇ ಹೋಗಿದ್ದು ಬಹಳ ಬೇಸರದ ಸಂಗತಿ. ಡಾಕ್ಟರೇಟ್ ಪದವಿ ಪಡೆದ ನಂತರ 8 ವರ್ಷಗಳ ಕಾಲ ಹಲವು ವಿಜ್ಞಾನ ಸಂಸ್ಥೆಗಳಲ್ಲಿ ಖಗೋಳವಿಜ್ಞಾನ, ಬ್ರಹ್ಮಾಂಡ ಅಧ್ಯಯನ, ನಕ್ಷತ್ರ ನಿಹಾರಿಕೆ ಕುರಿತು ಅಧ್ಯಯನ ನಡೆಸಿದರು, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾದರು, ಪ್ರೌಢಪ್ರಬಂಧಗಳನ್ನು ಪ್ರಕಟಿಸಿದರು.

ಹಲವು ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿ ವಿಶ್ವದ ಉಗಮದ ಬಗೆಗೆ ಮಹಾಸ್ಫೋಟ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದ ಫ್ರೆಡ್ ಹಾಯ್ಲ್ ಅವರನ್ನು ಎದುರು ಹಾಕಿಕೊಂಡರು. ಹಲವು ವರ್ಷಗಳಿಂದ ಗೆಹ್ ರಿಗ್ ಕಾಯಿಲೆ ಎಂದೇ ಹೆಸರಾದ ಅಮಿಯೊಟ್ರೋಫಿಕ್ ಲ್ಯಾಟರಲ್ ಸ್ಕ್ಲೀರೋಸಿಸ್ ಎಂಬ ತೀವ್ರತರದ ಸ್ನಾಯುಚಾಲಕ ನರಕೋಶದ ಖಾಯಿಲೆಗೆ ತುತ್ತಾಗಿ ವಿದ್ಯುತ್ ಚಾಲಿತ ಗಾಲಿ ಕುರ್ಚಿಯನ್ನೇ ಅವಲಂಬಿಸಿದ್ದರು.

ವಿಪರೀತ ಅಶಕ್ತತೆ ಹೊಂದಿದ್ದರ ಪರಿಣಾಮ ಸರಿಯಾಗಿ ಮಾತನಾಡಲು ಬಾರದ, ಕಣ್ಣು ಸರಿಯಾಗಿ ಕಾಣದ, ಕಿವಿ ಕೇಳದ, ಕೈ ಕಾಲು ಮುಂತಾದ ದೇಹದ ಅವಯವಗಳು ಸರಿಯಾದ ಚಲನೆಯಲ್ಲಿರದ, ಆದರೆ ಮೆದುಳು ಮಾತ್ರ ಚುರುಕಾಗಿ ಕಾರ್ಯನಿರ್ವಹಿಸುವ ಜಗತ್ತಿನ ಯಾವುದಾದರೂ ಒಬ್ಬ ವ್ಯಕ್ತಿ, ವಿಜ್ಞಾನಿಯು ಇದುವರೆಗೂ ಇದ್ದರೆ ಅದು ಪ್ರೊ.ಸ್ಟಿಫನ್ ಹಾಕಿಂಗ್ ಮಾತ್ರ, ಜೊತೆಗೆ ಅವರೊಬ್ಬ ಪ್ರೊಫೆಸರ್ ಕೂಡಾ.! ಈ ವಿಶೇಷತೆಯಿಂದಲೇ ಅವರು ಜಗತ್ತಿನಲ್ಲಿ ಪ್ರಸಿದ್ಧ ವಿಜ್ಞಾನಿ ಎನಿಸಿದರು. ಸ್ಟಿಫನ್ 76 ವರ್ಷ ಬದುಕಿ ವೈದ್ಯಲೋಕಕ್ಕೆ ಸವಾಲೆಸದದ್ದು ಒಂದು ಪವಾಡವೇ ಸರಿ.!

ತಾವು ಚಿಕಿತ್ಸೆ ಪಡೆಯುತ್ತಿದ್ದ ಅನುಭವಗಳೇ ಅವರಿಗೆ ಜೀವ ತುಂಬಿದ್ದವು. ತಮ್ಮ ಅನುಭವಗಳನ್ನು ನೆನೆಸಿಕೊಳ್ಳುತ್ತಾ ನನ್ನ ಹಾಸಿಗೆಯ ಎದುರಿನ ಹಾಸಿಗೆಯಲ್ಲಿ ಒಬ್ಬ ಸಣ್ಣ ಹುಡುಗನಿದ್ದ. ಅವನಿಗೆ ರಕ್ತದ ಅರ್ಬುದ (ಬ್ಲಡ್ ಕ್ಯಾನ್ಸರ್) ರೋಗವಿತ್ತು. ಅವನು ನೋವಿನಿಂದ ನರಳಿ ಅಸುನೀಗಿದ. ನನ್ನ ಸ್ಥಿತಿ ಅವನದಕ್ಕಿಂತ ಉತ್ತಮವಾಗಿದೆ, ನನಗೆ ಅಂಥಹ ಭಯಂಕರ ನೋವುಗಳಿಲ್ಲ. ನನ್ನ ಸ್ಥಿತಿಯಿಂದ ನನಗೆ ಬೇಸರವಾದಾಗಲೆಲ್ಲಾ ನಾನು ಆ ಹುಡುಗನನ್ನು ನೆನೆಸಿಕೊಳ್ಳುತ್ತೇನೆ ಎಂದಿದ್ದರು. ಇಂತಹ ಸಾಧಕ 14 ಮಾರ್ಚ್ 2018ರಂದು ಅವರೇ ಅಧ್ಯಯನ ಮಾಡುತ್ತಿದ್ದ ಕಪ್ಪುರಂಧ್ರದಲ್ಲಿ ಲೀನವಾದರು.

1974 ಸ್ಟಿಫನ್‌ರಿಗೆ ಆಗ ಕೇವಲ 32 ವರ್ಷ ವಯಸ್ಸು, ಆಗಲೇ ಅವರು ಪ್ರತಿಷ್ಠಿತ ರಾಯಲ್ ಸೊಸೈಟಿಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಒಬ್ಬ ಪುಸ್ತಕ ಪ್ರಕಾಶಕರು ಇವರಲ್ಲಿಗೆ ಬಂದು, ನೀವು ಇದುವರೆಗೂ ಕಂಡು ಹಿಡಿದ ಎಲ್ಲ ವಿಚಾರಗಳನ್ನು ಒಳಗೊಂಡಂತಹ ಒಂದು ಪುಸ್ತಕ ಬರೆದು ಕೊಡಿ ಎಂದಿದ್ದರಂತೆ. ಇದಕ್ಕೆ ಒಪ್ಪಿಗೆ ಸೂಚಿಸಿದ ಹಾಕಿಂಗ್ ಮೂರು ವರ್ಷ ಅಧ್ಯಯನ ಮಾಡಿ ಒಂದು ಪುಸ್ತಕ ಬರೆದು ಕೊಟ್ಟರಂತೆ. ಪುಸ್ತಕವನ್ನು ಕಂಡ ಆ ಸಂಪಾದಕ ಮರುದಿನವೇ ಇವರ ಮನೆಗೆ ಬಂದು ಸ್ಟಿಫನ್, ನೀವು ಪುಸ್ತಕದಲ್ಲಿ ಗಣಿತ ಸೂತ್ರಗಳನ್ನೆಲ್ಲಾ ತುಂಬಿಸಿ ಬರೆದಿದ್ದೀರಿ. ಇದು ವಿಜ್ಞಾನೇತರ ವ್ಯಕ್ತಿಗಳಿಗೆ ಅರ್ಥವಾಗದು.

ಅದು ಬಿಡಿ ನಿಮ್ಮ ಪುಸ್ತಕ ನೋಡಿ ನನಗೇ ಒಂದು ಅರ್ಥವಾಗಲಿಲ್ಲ ಎಂದು ಹೇಳಿದರಂತೆ. ಪುಸ್ತಕ ಮೂವತ್ತೈದು ಭಾಷೆಗಳಿಗೆ ಅನುವಾದಗೊಂಡು ಲಂಡನ್‌ನ ಸಂಡೇ ಟೈಮ್ ನಿಯತ ಕಾಲಿಕೆಯ ಬೆಸ್ಟ್ ಸೆಲ್ಲರ್ ಪಟ್ಟಿಯಲ್ಲಿ ರಾರಾಜಿಸಿದ್ದು ಈಗ ಇತಿಹಾಸ. ತಮಗಿದ್ದ ಇಂತಹ ಬಹುಅಂಗವೈಕಲ್ಯದ ನಡುವೆಯೂ ಅವರು ಸಾಕಷ್ಟು ಉತ್ಕೃಷ್ಟ ಕೃತಿಗಳನ್ನು ಬರೆದರು ಎಂದರೆ ನಮಗೆಲ್ಲಾ ಆಶ್ಚರ್ಯವೆನಿಸಬಹುದು. ಅವರ ಕೃತಿಗಳೆಂದರೆ ಗ್ರಾಂಡ್ ಡಿಸೈನ್, ಎ ಬ್ರಿಫ್ ಹಿಸ್ಟರಿ ಆಫ್ ಟೈಮ್, ಬ್ಲಾಕ್ ಹೋಲ್ ಇತ್ಯಾದಿ. ಕೃಷ್ಣ ರಂಧ್ರದ ಕುರಿತಾದ ಸಂಶೋಧನೆ ಕೈಗೊಂಡು ಅದರ ಅಸ್ತಿತ್ವದ ಬಗ್ಗೆ ತಿಳಿಸಿದಾಗ ಅನೇಕ ಪತ್ರಿಕೋದ್ಯಮಿಗಳು, ಸಾರ್ವಜನಿಕರು, ಸ್ಟಿಫನ್ ಹಾಕಿಂಗ್‌ರನ್ನೇ ಕೃಷ್ಣ ವಿವರ ಎಂದು ಕರೆದರು.

2014ರಲ್ಲಿ ಎ.ಎಲ್.ಎಸ್ ಕಾಯಿಲೆ ಬಗ್ಗೆ ಜನಜಾಗೃತಿ ಮೂಡಿಸಲು ಐಸ್ ಬಕೆಟ್ ಚಾಲೆಂಜ್ ಎಂಬ ಆಟದ ಪಂಥಾಹ್ವಾನವನ್ನು ಸ್ವೀಕರಿಸಿ ಗಾಲಿ ಕುರ್ಚಿಯ ಮೇಲೆ ಕುಳಿತ ಸ್ಟಿಫನ್ ತನ್ನ ಮೇಲೆ ಮಂಜುಗಟ್ಟಿದ್ದ ಆ ಶೈತ್ಯ ನೀರನ್ನು ಬಕೆಟ್‌ಗಟ್ಟಲೇ ಸುರಿಸಿಕೊಂಡು ಬಿಟ್ಟರು, ಕ್ಷಣದಲ್ಲಿಯೇ ಅಲ್ಲಿ ನೆರೆದ ಜನ ದಂಗಾಗಿ ಹೋದರು. ಹೇಳುತ್ತಾ ಹೊರಟರೆ ಸ್ಟೀಫನ್‌ರ ಜೀವನೋತ್ಸಾಹ, ತರ್ಕಬದ್ಧ ಉನ್ನತ ವಿಚಾರಗಳು, ಸಾಧನೆಗಳಿಗೆ ಕೊನೆಯೇ ಇಲ್ಲದಂತಾಗುತ್ತದೆ, ಅವರ ಸಾಧನೆಗಳು ಮಾತ್ರ ಈ ವಿಶ್ವ ಇರುವವರೆಗೂ ಇರುತ್ತವೆ.

**- ಎಲ್.ಪಿ.ಕುಲಕರ್ಣಿ**, ಬಾದಾಮಿ




## ನಿಖರತೆ

ರಮೇಶನಿಗೆ ಸರಿಯಾಗಿ ತಿಳಿದಿತ್ತು ತಾನು ಹೋಗಬೇಕಾಗಿರುವ ದೂರ ತಲುಪ ಬೇಕಾಗಿರುವ ಎತ್ತರ ಎಲ್ಲವನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದ. ಆದರೆ ತಲುಪಬೇಕಾದ ದಾರಿಯು ಸರಿಯಾಗಿ ಕಂಡ ಮೇಲೆ ನಿಖರವಾಗಿ ತಿಳಿದ ಮೇಲೆ ಆ ಕಡೆಗೆ ಪಯಣವನ್ನು ಬೆಳೆಸಬೇಕು, ಸರಿಯಾಗಿ ಕಾಣದೇ ಹೋದಾಗ ಸಾಗುವ ದಾರಿಯ ಬಗ್ಗೆ ನಿಖರತೆ ಇರೋದಿಲ್ಲ ಹಾಗಾಗಿ ದೃಷ್ಟಿಯನ್ನು ಸರಿ ಮಾಡಬೇಕಿತ್ತು ಹಾಗಾಗಿ ದೃಷ್ಟಿಯನ್ನು ಸರಿಪಡಿಸಿಕೊಂಡು ಹೋಗುವ ದಾರಿ ಮತ್ತು ತಲುಪಬೇಕಾದ ಜಾಗ ಎರಡನ್ನು ಅರ್ಥೈಸಿ ತಿಳಿದುಕೊಂಡ. ತಾನು ತಲುಪಬೇಕಾದ ದೂರಕ್ಕೆ ಇಷ್ಟು ನಿಖರತೆ ಇರುವಾಗ ಜೀವನದ ಗುರಿಯ ಬಗ್ಗೆ ಇನ್ನೆಷ್ಟು ನಿಖರತೆ ಇರಬೇಕು ಅನ್ನೋದು ಅವನಿಗೆ ತಡವಾಗಿ ಅರ್ಥವಾಗಿತ್ತು. ಹಾಗಾಗಿ ಒಂದಷ್ಟು ತಪ್ಪು ನಿರ್ಧಾರಗಳಾಗಿದ್ದವು ಸಮಯ ಕಳೆದುಹೋಗಿತ್ತು ಆದರೂ ಬೇಸರಿಸಿ ಕೊಳ್ಳದೆ ಇದೆಲ್ಲವೂ ಜೀವನದ ಅನುಭವ ಅಂತಂದುಕೊಂಡು ಗುರಿಯನ್ನು ಸ್ಪಷ್ಟವಾಗಿ ನಿರ್ಧರಿಸಿ ಹೆಜ್ಜೆ ಇಟ್ಟಿದ್ದ ಈಗ ಅವನಿಗೆ ಯಾವುದೇ ಅಳುಕಿರಲಿಲ್ಲ ಯಾಕೆಂದರೆ ಆತನಿಗೆ ಸರಿಯಾಗಿ ತಿಳಿದಿದ್ದು ತಾನು ಖಂಡಿತ ಆ ಗುರಿಯನ್ನು ತಲುಪುತ್ತೇನೆ ಎಂದು.



**- ಧೀರಜ್** ಬೆಳ್ಳಾರೆ

## ಪ್ರತಿಭೆ



ಪ್ರತಿಭೆಗಳಿಗೆ ಮಿನುಗಲು ವೇದಿಕೆ ಬೇಕು, ರಾತ್ರಿ ಹಗಲೆನ್ನದೆ ಪರಿಶ್ರಮ ಪಟ್ಟು ಎಲ್ಲರಿಗಿಂತ ವಿಭಿನ್ನವಾಗಿ ತಾವೇನು ಅಂತ ತೋರಿಸಿಕೊಳ್ಳುವುದಕ್ಕೆ ವೇದಿಕೆಯನ್ನು ಹುಡುಕುತ್ತಿದ್ದಾರೆ. ಹಾಗೆ ವೇದಿಕೆಯ ಮೇಲೇರಿ ಪ್ರತಿಭಾ ಪ್ರದರ್ಶನವನ್ನು ನೀಡಿದರು. ಬಂದವರೆಲ್ಲರಿಗೂ ಇಷ್ಟವಾಗಿದ್ದು ಎಲ್ಲರೂ ಮೆಚ್ಚುಗೆಯನ್ನು ಸೂಚಿಸಿದರು. ಆದರೆ ಕುಳಿತ ತೀರ್ಪುಗಾರರಿಗೆ ಮಾತ್ರ ಒಪ್ಪಿಗೆ ಆಗ್ಲೇ ಇಲ್ಲ. ಅವರ ಮನಸ್ಸಿನಲ್ಲಿ ಕಟ್ಟಿಕೊಂಡಿದ್ದ ಗೂಡಿನೊಳಗೆ ಪ್ರವೇಶಿಸುವ ವಿಚಾರಧಾರೆಗಳಿಗೆ ಮಾತ್ರ ಗೆಲುವು.

ಸೋತವರಿಗೆ ನೋವಾದದ್ದು ನಿಜ ಆದರೆ ಎಲ್ಲರ ಮನಸ್ಸಿನಲ್ಲಿ ಗೆಲುವು ಪಡೆದರೂ ತೀರ್ಪುಗಾರರ ತೀರ್ಪಿನಲ್ಲಿ ಮಾತ್ರ ಸೋಲನ್ನಪ್ಪಿ ಕೊಳ್ಳಬೇಕಾಗಿತ್ತು. ಮತ್ತೊಂದು ಹೊಸ ಪ್ರಯತ್ನದ ನಿರೀಕ್ಷೆಯಲ್ಲಿ ಪ್ರತಿಭಾ ಪ್ರದರ್ಶನದ ತಂಡ ತಯಾರಾಗ್ತಾ ಇತ್ತು. ತಾವೇನು ಅನ್ನೋದನ್ನ ತೋರಿಸುವುದಕ್ಕೆ ಹೊರಟಿತ್ತು. ಯಾರನ್ನು ದೂರುವುದಕ್ಕೆ ಹೋಗದೆ ಮತ್ತೊಂದು ವೇದಿಕೆಯ ಮೇಲೆ ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಅಣಿಯಾಗಿತ್ತು.


## ಕನ್ನಡ ಕವನಗಳು



### ಸಹೃದಯಿಯ ಸ್ಮರಣೆ

ಕರುಣೆ ಅಂಗಡಿ ಇಟ್ಟು ಮಾರದಿರಿ ಅನುಕಂಪ
ಹೋಳಿಗೆಯಂತೆ ಮನಸ್ಸು ಒಳಗೆ ಸಿಹಿ ಹೂರಣದ ಕನಸು
ನೆರಳು ನೀಡುವ ಮರಕೆ ಗಿಳಿ ನೂರು ಬಂದಂತೆ
ನಾವು ಬಂದೆವು ನಿಮ್ಮ ಒಡಗೂಡಿ
ಹಣ್ಣ ನೀಡಿದಿರಿ ಕಣ್ಣ ನೀಡದಿರಿ ದೀಪದಿಂದ ದೀಪಹಚ್ಚಿ//
ಗೂಡಿನಿಂದ ಹಕ್ಕಿಗಳು ಹಾರಿಹೋದಂತೆ
ಎದ್ದು ಹೋದಿರಿ ನೀವು ಜಗದ ಜಂಜಡವ ಮುಗಿಸಿ/
ಬರಿದಾದ ಮನಗಳಿಗೆ ಶುಭವನ್ನೆ ಹರಿಸಿ//
ಕಾಲನ ಕರೆಗೆ ಓಗೊಟ್ಟು ನಡೆದಿರಿ
ಸ್ಪಂದಿಸುವರಾರಿಲ್ಲ ನಿಮ್ಮ ತೆರದಿ
ನಿಮ್ಮ ಆಗಮನ ದರೆಗೆ ಬೆಳಕಿನ ಕಿರಣ
ಮಂದಿ ಕಟ್ಟುವರು ನಿಮ್ಮ ನೆನೆದು ಬಾಗಿಲಿಗೆ ತೋರಣ//
ಖಂಡಿತ ನೀವು ದೇವರೊಡನೆ ಇರುವಿರಿ ನಕ್ಷತ್ರವಾಗಿ
ಆ ದೇವರಿಗೂ ಪ್ರೀತಿ ನಿಮ್ಮಂತ ಸಹಯೋಗಿ/
ಬೇಡುವೆವು ನಾವೆಲ್ಲ ನಿಮ್ಮ ಆರ್ಶಿವಾದಕ್ಕಾಗಿ//
ನಿಮ್ಮ ಜನ್ಮ ದಿನವ ನೆನಪಿಸುವ ಸುದಿನ
ಸರ್ವರಿಗೂ ಸಂತೋಷದ ಕ್ಷಣ
ಕೊಟ್ಟು ಬಿಡಿ ಎಲ್ಲರಿಗೂ ನಿಮ್ಮಾತ್ಮದೊಂದು ತುಣುಕು
ಜಗಕೆಲ್ಲ ಹರಡಲಿ ಸಮಾಜ ಸೇವೆಯ ಬೆಳಕು
ಜಗಕೆಲ್ಲ ಹರಿಯಲಿ ಅರಿವಿನ ಬೆಳಕು//

**- ರತ್ನ ಕೃಷ್ಣೇಗೌಡ** ಹಾಸನ, ವಿದ್ಯಾನಗರ
ಮೊ. ನಂ: 7619320863



# ಸಕಲೇಶಪುರ ಕ್ಷೇತ್ರಕ್ಕೆ ಎಷ್ಟು ಅನುದಾನ ತಂದಿದ್ದಾರೆ?

## ಶಾಸಕ ಸಿಮೆಂಟ್ ಮಂಜು ಸಾರ್ವಜನಿಕರಿಗೆ ತಿಳಿಸಲಿ | ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಸವಾಲು

• ಪ್ರಜೋದಯ ವರದಿ

**ಸಕಲೇಶಪುರ:** ಕ್ಷೇತ್ರದ ಹಾಲಿ ಶಾಸಕ ಸಿಮೆಂಟ್ ಮಂಜು ಅವರು ತಮ್ಮ ಎರಡುವರೆ ವರ್ಷದ ಅವಧಿಯಲ್ಲಿ ಯಾವ ಯಾವ ಶೀರ್ಷಿಕೆಯಡಿ ಎಷ್ಟು ಅನುದಾನ ಮಂಜೂರಾಗಿದೆ ಎಂಬ ಸಂಪೂರ್ಣ ವಿವರವನ್ನು ಸಾರ್ವಜನಿಕವಾಗಿ ತಿಳಿಸಬೇಕು ಎಂದು ಮಾಜಿ ಸಚಿವ ಎಚ್.ಕೆ. ಕುಮಾರಸ್ವಾಮಿ ಅವರು ಒತ್ತಾಯಿಸಿದರು.

ಪಟ್ಟಣದಲ್ಲಿ ಪ್ರಜೋದಯ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹಾಗೂ ವಿವಿಧ ಇಲಾಖೆಗಳ ಮೂಲಕ ಶಾಸಕರು ತಮ್ಮ ಅವಧಿಯಲ್ಲಿ ಎಷ್ಟು ಅನುದಾನ ತಂದಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರಲ್ಲದೆ, ತಮ್ಮ ಅವಧಿಯಲ್ಲಿ ಮಂಜೂರಾದ ಅನೇಕ ಕಾಮಗಾರಿಗಳು ಇಂದಿಗೂ ಪೂರ್ಣಗೊಂಡಿಲ್ಲ ಎಂಬುದಕ್ಕೆ ಹಲವು ಉದಾಹರಣೆಗಳನ್ನು ನೀಡಿದರು.

ಸಕಲೇಶಪುರದ ಕ್ರೀಡಾಂಗಣಕ್ಕೆ ತಮ್ಮ ಅವಧಿಯಲ್ಲಿ 1 ಕೋಟಿ 11 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಇದರಲ್ಲಿ ಕೇವಲ 27 ಲಕ್ಷ ರೂ. ಮಾತ್ರ ಬಿಲ್ ಆಗಿದ್ದು, ಉಳಿದ ಕಾಮಗಾರಿ ಸ್ಥಗಿತಗೊಂಡಿದೆ. 2022– 23ರಲ್ಲಿ ಮಳೆ ಹಾನಿ ಪರಿಹಾರ ನಿಧಿಯಿಂದ ಸುಮಾರು 1 ಕೋಟಿ 22 ಲಕ್ಷ ರೂ. ವೆಚ್ಚದ ಸುಮಾರು 30 ಕಾಮಗಾರಿಗಳಿಗೆ ಅನುಮೋದನೆ ದೊರೆತಿದ್ದರೂ, ಅವುಗಳಲ್ಲಿ ಅನೇಕ ಕೆಲಸಗಳು ಇನ್ನೂ ಆರಂಭವಾಗಿಲ್ಲ ಎಂದು ದೂರಿದರು.

ತಮ್ಮ ಅವಧಿಯಲ್ಲಿ ರಸ್ತೆ ಅಭಿವೃದ್ಧಿಗೆ ಸುಮಾರು 34 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಐಬಿ ಸೇರಿದಂತೆ ಹಲವು ಕಾಮಗಾರಿಗಳು ಆರಂಭಗೊಂಡಿದ್ದವು. ಆದರೆ ಅವುಗಳನ್ನು ಪೂರ್ಣಗೊಳಿಸದೆ ಈಗ ಹಾಲಿ ಶಾಸಕರು ನನ್ನ ಅವಧಿಯಲ್ಲಿ ಮಂಜೂರಾದ ಕಾಮಗಾರಿಗೆ ಪೂಜೆ ಹಾಗೂ ಉದ್ಘಾಟನೆಗಳನ್ನು ನಡೆಸುತ್ತಿರುವುದು ಸರಿಯಲ್ಲ ಎಂದು ಅವರು ಟೀಕಿಸಿದರು.

ಎತ್ತಿನಹೊಳೆ ಯೋಜನೆಯಡಿ ಸುಮಾರು 360 ಕೋಟಿ ರೂ. ಅನುದಾನ ತಂದು ಸಕಲೇಶಪುರ ಹಾಗೂ ಆಲೂರು ತಾಲೂಕುಗಳಲ್ಲಿ ನೀರು ಹರಿಸುವ ಕಾಮಗಾರಿಗಳನ್ನು



ಕೈಗೊಳ್ಳಲಾಗಿದೆ. ಆದರೆ ಪಟ್ಟಣದ ಕುಡಿಯುವ ನೀರಿನ ಯೋಜನೆಗೆ ಮಂಜೂರಾದ 12 ಕೋಟಿ ಹಾಗೂ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಗೆ ಮಂಜೂರಾದ 12 ಕೋಟಿ ರೂ. ಅನುದಾನ ಬಳಕೆಯಾಗದೆ ಹಿಂದಿರುಗಿದೆ ಎಂದು ಆರೋಪಿಸಿದರು.

ಎಸ್‌ಎಫ್‌ಸಿ (ರಾಜ್ಯ ಹಣಕಾಸು ಆಯೋಗ) ವಿಶೇಷ ಅನುದಾನದಡಿ ₹4 ಕೋಟಿ ಮಂಜೂರಾಗಿದ್ದು, ಆಕ್ಷನ್ ಪ್ಲಾನ್ ಸಿದ್ಧಪಡಿಸಿ ಸರ್ಕಾರದಿಂದ ಮೂರು ಬಾರಿ ರಿಮೈಂಡರ್ ಬಂದಿದ್ದರೂ ಕಳೆದ ಮೂರು ವರ್ಷಗಳಿಂದ ಕಾಮಗಾರಿಗಳು ಆರಂಭವಾಗಿಲ್ಲ ಎಂದು ಹೇಳಿದರು. ಪಟ್ಟಣದ ಒಳಭಾಗದಲ್ಲಿ ಸ್ವಾಗತ ಕಮಾನು, ತರಕಾರಿ ಮಾರುಕಟ್ಟೆ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಸುಮಾರು 40 ಲಕ್ಷ ರೂ. ಮಂಜೂರಾದರೂ ಒಂದು ರೂಪಾಯಿಯೂ ಖರ್ಚಾಗಿಲ್ಲ ಎಂದು ದೂರಿದರು.

ಹಾಲಿ ಶಾಸಕರ ಅವಧಿಯಲ್ಲಿ ಪಿಡಬ್ಲ್ಯೂಡಿ ಇಲಾಖೆಯ ಅನುದಾನದಿಂದ ಕೆಲವೇ ರಸ್ತೆ ಕಾಮಗಾರಿಗಳು ಮಾತ್ರ ಆರಂಭವಾಗಿವೆ. ಕೊಡ್ಲಿಪೇಟೆ–ಬಾಳ್ಳುಪೇಟೆ ರಸ್ತೆ, ಬೆಳಗೋಡು–ಈಶ್ವರಳ್ಳಿ ರಸ್ತೆ ಸೇರಿದಂತೆ ಒಂದೆರಡು ಕಾಮಗಾರಿಗಳ ಹೊರತು ಬೇರೆ ಯಾವುದೇ ಮಹತ್ವದ ಅಭಿವೃದ್ಧಿ ಕಾಣುತ್ತಿಲ್ಲ ಎಂದು ಹೇಳಿದರು.

ಅಂಬೇಡ್ಕರ್ ಭವನದ ಉದ್ಘಾಟನೆ ಕುರಿತು ಪ್ರತಿಕ್ರಿಯಿಸಿದ ಅವರು, ಆ ಭವನವು ಶೇಕಡಾ 100ರಷ್ಟು ತಮ್ಮ ಅವಧಿಯ ಅನುದಾನದಿಂದಲೇ ನಿರ್ಮಾಣವಾಗಿದೆ. 12 ಲಕ್ಷ ರೂ. ಸಂಪೂರ್ಣವಾಗಿ ತಮ್ಮ ಅನುದಾನವಾಗಿದ್ದು, ಹಾಲಿ ಶಾಸಕರ ಪಾಲು ಒಂದೂ ರೂಪಾಯಿ ಇಲ್ಲ. ಈಗ ನಡೆಯುತ್ತಿರುವ ಹಲವಾರು ಉದ್ಘಾಟನೆಗಳು ತಮ್ಮ ಅವಧಿಯ ಅನುದಾನದಲ್ಲಿ ನಡೆದ ಕಾಮಗಾರಿಗಳೇ ಆಗಿವೆ. ಇದರಲ್ಲಿ ಯಾವುದೇ ಗೊಂದಲ ಇದ್ದರೆ ಹಾಲಿ ಶಾಸಕರು ಸ್ಪಷ್ಟನೆ ನೀಡಲಿ ಎಂದು ಅವರು ಸವಾಲು ಹಾಕಿದರು.

ಪುರಸಭಾ ಆಡಳಿತ ಜೆಡಿಎಸ್ ತೆಕ್ಕೆಯಲ್ಲಿದೆ ಎಂಬ ಒಂದೇ ಒಂದು ಕಾರಣ ಇಟ್ಟುಕೊಂಡು ಮಳಲಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಘನ ತ್ಯಾಜ್ಯ ವಿಲೇವಾರಿ ಘಟಕದ ಉದ್ಘಾಟನೆಗೆ ಅಡ್ಡಿಪಡಿಸಿದ್ದಾರೆ. ದೊಡ್ಡಕೆರೆ ಅಭಿವೃದ್ಧಿಗೆ ಮೀಸಲಿಟ್ಟಿದ್ದ 27 ಲಕ್ಷ ರೂ. ಅನುದಾನದ ಕಾಮಗಾರಿಯನ್ನು ತಡೆ ಹಿಡಿದಿದ್ದಾರೆ. ಹಳೆ ಬಸ್ ನಿಲ್ದಾಣ ಸಮೀಪ ನಿರ್ಮಾಣವಾಗಿರುವ ವಾಣಿಜ್ಯ ಕಟ್ಟಡದ ಉದ್ಘಾಟನೆಗೂ ಅಡ್ಡಿಪಡಿಸಿ ರಾಜಕೀಯ ಸಣ್ಣತನವನ್ನು ತೋರಿದ್ದಾರೆ ಎಂದು ಆರೋಪಿಸಿದರು.

ಹಾಲಿ ಶಾಸಕರು ತಮ್ಮ ಅವಧಿಯ ಅಭಿವೃದ್ಧಿ ಕಾರ್ಯಗಳು ಹಾಗೂ ಅನುದಾನಗಳು, ಸಿದ್ದರಾಮಯ್ಯ ಸರ್ಕಾರ ಕ್ಷೇತ್ರಕ್ಕೆ ನೀಡಿರುವ ಅನುದಾನದ ಮಾಹಿತಿ ಜನರಿಗೆ ತಿಳಿಯಲಿದೆ. ಇದರಿಂದ ಕಾಂಗ್ರೆಸ್ ಸರ್ಕಾರದ ಕಾರ್ಯಕ್ಷಮತೆ ಕೂಡ ಬಹಿರಂಗವಾಗುತ್ತದೆ ಎಂದು ಹೆಚ್.ಕೆ. ಕುಮಾರಸ್ವಾಮಿ ಹೇಳಿದರು.

## ದಾಖಲೆಗಳ ಪರಿಶೀಲನೆಗೆ ಒಳಪಡಿಸಿ

» ಮೊದಲನೇ ಪುಟದಿಂದ

ದಿನದಲ್ಲಿ ಗಡಿದಾಟಿ ಬಂದಿರುವವರಲ್ಲ. ಅಸ್ಸಾಂ, ಪಶ್ಚಿಮಬಂಗಾಳ, ನೇಪಾಳ ಮೂಲಕ ದೊಡ್ಡ ಪ್ರಮಾಣದಲ್ಲಿ ಗಡಿದಾಟಿ ಬಂದಿದ್ದಾರೆ. ಸ್ವಾತಂತ್ರ್ಯ ನಂತರ ಸುರಕ್ಷಿತ ವಾತಾವರಣ ಇರಲಿಲ್ಲ. ಈ ದೇಶದೊಳಗೆ ಅಕ್ರಮವಾಗಿ ನುಸುಳಿ ಬಂದವರಿಗೆ ರಾಜಮಾರ್ಗ ತೋರಿಸುವ ರಾಜಕೀಯ ವ್ಯವಸ್ಥೆ ಜೀವಂತವಾಗಿದೆ. ಆ ರಾಜಕೀಯ ವ್ಯವಸ್ಥೆಗೆ ದೊಡ್ಡ ಶಕ್ತಿ ತುಂಬಿರುವುದೇ ಕಾಂಗ್ರೆಸ್ ಮತ್ತು ಅವರು ಬೆಂಬಲಿಸುತ್ತಿರುವ ಒಕ್ಕೂಟ ಎಂದರು.


ಬಾಂಗ್ಲಾ ವಲಸಿಗರನ್ನು ನಿರ್ದಾಕ್ಷಿಣ್ಯವಾಗಿ ಹೊರಕಲು ಕಾಂಗ್ರೆಸ್‌ನವರು ನಮಗೆ ಸಹಕಾರ ನೀಡಲಿ. ಅದನ್ನು ಬಿಟ್ಟು ಏಕೆ ಸಿಎಎ, ಎನ್‌ಆರ್‌ಸಿ, ಎಸ್‌ಐಆರ್‌ಇ ವಿರೋಧ ಮಾಡುತ್ತಾರೆ ಎಂದು ಪ್ರಶ್ನಿಸಿದ ಅವರು, ದೇಶ ಹಾಳಾದರೂ ಚಿಂತೆ ಯಿಲ್ಲ ವಲಸಿಗರ ಮತ ಪಡೆದು ಗೆದ್ದು ಬಂದರೆ ಸಾಕು ಎಂಬ ಮನಸ್ಥಿತಿ ಕಾಂಗ್ರೆಸ್‌ನಲ್ಲಿದೆ. ಸಿಎಎ, ಎನ್‌ಆರ್‌ಸಿ, ಎಸ್‌ಐಆರ್‌ಇ ವಿರೋಧ ಮಾಡುವುದರ ಹಿಂದೆ ಅಕ್ರಮ ಮತ ಬ್ಯಾಂಕ್ ಹಿತಸಕ್ತಿ ಮಾತ್ರ. ನಿಮಗೆ ತಾಕತ್ ಇದ್ದರೆ ಅಕ್ರಮ ವಲಸಿಗರನ್ನು ಹೊರಹಾಕಬೇಕೆಂದು ನಮ್ಮ ಹಾಗೆ ಗಟ್ಟಿ ಧ್ವನಿಯಿಂದ ಹೇಳಿ ಎಂದು ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದರು.

ಕೇಂದ್ರ ಸರ್ಕಾರ ಅಕ್ರಮ ಬಾಂಗ್ಲಾ ವಲಸಿಗರನ್ನು ಹೊರದೂಡುವ ಕೆಲಸ ಮಾಡುತ್ತದೆ. ದೇಶದ ಹಿತದೃಷ್ಟಿಯಿಂದ ಕಾಂಗ್ರೆಸ್ ಪೂರಕವಾಗಿ ಸ್ಪಂದಿಸಬೇಕು. ದೇಶ ಸುರಕ್ಷಿತವಾಗಿದ್ದರೆ ಸಂವಿಧಾನ ಉಳಿಯುತ್ತದೆ. ಕೈಯಲ್ಲಿ ಸಂವಿಧಾನ ಪುಸ್ತಕ ಹಿಡಿದುಕೊಂಡ ಮಾತ್ರಕ್ಕೆ ಉಳಿಯುವುದಿಲ್ಲ ಎಂದು ತಿರುಗೇಟು ನೀಡಿದರು.

## ಪಾಳ್ಯ ನಾಡಕಚೇರಿ ಕಟ್ಟಡ ನಿರ್ಮಾಣಕ್ಕೆ ಕ್ರಮ ಅಗತ್ಯ

» ಮೊದಲನೇ ಪುಟದಿಂದ

**ಉಪ ನಾಡಕಚೇರಿ ಆರಂಭಕ್ಕೆ ಜಿಲ್ಲಾಧಿಕಾರಿಗೆ ಪತ್ರ**



ಆಲೂರು ತಾಲ್ಲೂಕಿನ ಪಾಳ್ಯ ಹೋಬಳಿಯ ನಾಡಕಚೇರಿ ವ್ಯಾಪ್ತಿ ಸುಮಾರು 30 ಕಿಲೋ ಮೀಟರ್ ವಿಸ್ತಾರ ಹೊಂದಿದ್ದು, 82ಕ್ಕೂ ಹೆಚ್ಚು ಗ್ರಾಮಗಳನ್ನು ಒಳಗೊಂಡಿದೆ. ಈ ವ್ಯಾಪ್ತಿಯ ಕಣತೂರು, ವಾಟೆಹೊಳೆ ಹಾಗೂ ಮಡಬಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ 30 ಗ್ರಾಮಗಳ ಸಾರ್ವಜನಿಕರು ನಾಡಕಚೇರಿ ಕೆಲಸಗಳಿಗಾಗಿ 30 ಕಿಲೋ ಮೀಟರ್ ದೂರ ಪ್ರಯಾಣಿಸಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ.

ಸಣ್ಣ ಕೆಲಸಗಳಿಗೂ ಹೆಚ್ಚಿನ ಕಾಲ ವ್ಯಯವಾಗುತ್ತಿರುವುದರಿಂದ ರೈತರು, ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನಲೆ ಸಾರ್ವಜನಿಕ ಹಿತದೃಷ್ಟಿಯಿಂದ ಕಣತೂರು ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದಲ್ಲಿ ಉಪ ನಾಡಕಚೇರಿ ಆರಂಭಿಸಬೇಕು ಎಂದು ಸಾರ್ವಜನಿಕರು ಮನವಿ ಮಾಡಿಕೊಂಡಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿಗಳು ಶೀಘ್ರದಲ್ಲೇ ಸ್ಥಳಕ್ಕೆ ಭೇಟಿ ನೀಡಿ ಪಾಳ್ಯ ನಾಡಕಚೇರಿಯ ವ್ಯಾಪ್ತಿಯಿಂದ ಕಣತೂರು, ವಾಟೆಹೊಳೆ ಹಾಗೂ ಮಡಬಲು ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳನ್ನು ಬೇರ್ಪಡಿಸಿ ಉಪ ನಾಡಕಚೇರಿ ಸ್ಥಾಪನೆಗೆ ಕ್ರಮ ಕೈಗೊಂಡರೆ, ಕಂದಾಯ ಸೇವೆಗಳು ಸಾರ್ವಜನಿಕರಿಗೆ ಸುಲಭವಾಗಿ ಮತ್ತು ಸಮೀಪದಲ್ಲೇ ಲಭ್ಯವಾಗಲಿವೆ ಎಂದು ಶಾಸಕ ಸಿಮೆಂಟ್ ಮಂಜು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.

## ಇಂದು ಕುರುಕ್ಷೇತ್ರ ಪೌರಾಣಿಕ ನಾಟಕ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಂಕ್ರಾಂತಿ ಹಬ್ಬ ಹಾಗೂ ಐತಿಹಾಸಿಕ, ಪುರಾಣ ಪ್ರಸಿದ್ಧ ಬೂಕನಬೆಟ್ಟದ ಜಾತ್ರಾ ಮಹೋತ್ಸವದ ಅಂಗವಾಗಿ ಜ.11 ರಂದು ಸಂಜೆ 7 ಗಂಟೆಗೆ ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸಲಾಗುತ್ತಿದೆ ಎಂದು ಶ್ರೀ ಸರಸ್ವತಿ ಕಲಾ ಸಂಘದ ಗೌರವಾಧ್ಯಕ್ಷ ಮಧು ಬೆಕ್ಕ ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯು ಮುಂದಿನ ಪೀಳಿಗೆಗೆ ತಲುಪಿಸುವುದು ಬಹುಮುಖ್ಯವಾಗಿದ್ದು, ಇದನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕು ಎಂಬುದು ನಮ್ಮ ಸಂಘದ ಧ್ಯೇಯೋದ್ದೇಶವಾಗಿದೆ ಎಂದು ತಿಳಿಸಿದರು.

ಭಾರತೀಯ ಸಂಸ್ಕೃತಿಯಲ್ಲಿ ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಮಹಾ ಕಾವ್ಯಗಳಾಗಿದ್ದು, ಈ ಮಹಾಭಾರತದ ಭಗವದ್ಗೀತೆ ಭಾಗವನ್ನು ಆಯ್ದುಕೊಂಡು, ಈ ನಾಟಕವನ್ನು ಚನ್ನರಾಯಪಟ್ಟಣ ತಾಲ್ಲೂಕಿನ ಪೌರಾಣಿಕ ರಂಗಕರ್ಮಿ ಸಚಿನ್ ರಂಗರಾಜು ನಿರ್ದೇಶನದಲ್ಲಿ, ಆಯ್ದ ಕಲಾವಿದರಿಂದ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಈ ಮಹಾಕಾವ್ಯಗಳಲ್ಲಿ ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳುವ ಅತ್ಯಮೂಲ್ಯ ಸಂದೇಶಗಳಿದ್ದು, ವಿಶೇಷವಾಗಿ ನಮ್ಮ ಯುವ ಸಮುದಾಯಕ್ಕೆ, ಮುಂದಿನ ತಲೆಮಾರಿಗೆ ನಮ್ಮ ಸಂಸ್ಕೃತಿಯ ಅರಿವುಮೂಡಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ಸರಸ್ವತಿ ಕಲಾ ಸಂಘದ ಅಧ್ಯಕ್ಷ ದ್ವಾರಕೀಶ್ ಬದ್ದಿಕೆರೆ, ಕಾರ್ಯದರ್ಶಿ ದಿನೇಶ್ ನಾರಾಯಣಪುರ ಇದ್ದರು.

## ಸಹಾಯಧನಕ್ಕೆ ಅರ್ಜಿ ಆಹ್ವಾನ

**ಹಾಸನ:** ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿಕಲಚೇತನ ಕ್ರೀಡಾಪಟುಗಳಿಗೆ ಸಾಧನೆ ಯೋಜನೆಯಡಿ ಸಹಾಯಧನಕ್ಕಾಗಿ 2025–26ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಅರ್ಹ ವಿಕಲಚೇತನರು ಸೇವಾ ಸಿಂಧು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಜ.31 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, 9ನೇ ಕ್ರಾಸ್, ಶಂಕರಮಠ ರಸ್ತೆ, ಕೆ.ಆರ್.ಪುರಂ, ಹಾಸನ ದೂರವಾಣಿ ಸಂಖ್ಯೆ; 08172–264546/295546 ಹಾಗೂ ಸಂಬಂಧಪಟ್ಟ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

# ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ರೈತರಿಗೆ ಸಹಕಾರಿ

## ಸಹಾಯಧನ ವಿತರಣೆ ಕಾರ್ಯಕ್ರಮದಲ್ಲಿ ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಕೃಷಿ ಕ್ಷೇತ್ರವನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಜಾರಿಗೊಳಿಸಿದ್ದು ರೈತರು ಅದರ ಸದುಪಯೋಗ ಪಡೆಯಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಕೃಷಿ ಇಲಾಖೆಯಿಂದ ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಕೃಷಿಯೇತರ ಆದಾಯ ಪುನಶ್ಚೇತನ ಯೋಜನೆಯಡಿ ಬ್ಯಾಕರವಳ್ಳಿ ಮತ್ತು ಕುರುಭತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿಡಿಗೆರೆ ಮತ್ತು ಬಿಳುತಾಳು ಗ್ರಾಮಗಲ್ಲಿ ಹಮ್ಮಿಕೊಂಡಿದ್ದ ಸಹಾಯಧನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಹಳ್ಳಿಗಳಲ್ಲಿ ರೈತರ ಬಲವರ್ಧನೆಗೆ ರೂಪಿಸಿರುವ ಯೋಜನೆಯಾಗಿದೆ. ಹಸು ಖರೀದಿಸಲು ರೈತರಿಗೆ ಸಹಾಯಧನ ಅವಕಾಶ ಒದಗಿಸಿರುವುದು ಅತ್ಯಂತ ಸಂತೋಷದಾಯಕವಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ 20ಕ್ಕೂ ಹೆಚ್ಚು ಹಳ್ಳಿಗಳು ಯೋಜನೆಯ ಫಲಾನುಭವಿಗಳಾಗಲು ಅವಕಾಶ ಇರುವುದರಿಂದ ಭಾಗದ ರೈತರು ಕೃಷಿ ಇಲಾಖೆಯನ್ನು ಸಂಪರ್ಕಿಸಿ ಫಲಾನುಭವಿಗಳಾಗಬೇಕೆಂದರು.



ಇಂತಹ ಯೋಜನೆಗಳನ್ನು ಅನುಷ್ಠಾನ ಮಾಡಲು ಇಲಾಖೆಯ ಅಧಿಕಾರಿಗಳ ಇಚ್ಛಾಸಕ್ತಿ ಕೇವಲ ಕರ್ತವ್ಯವಾಗಿರದೆ ರೈತರನ್ನು ಎಲ್ಲಾ ಸಂದರ್ಭಗಳಲ್ಲಿಯೂ ಗೌರವಿಸಿ ಅವರ ನೆರವಿಗೆ ನಿಲ್ಲುವುದಾಗಿದೆ. ಗ್ರಾಮ ಮಟ್ಟದಲ್ಲಿ ರೈತರಿಗೆ ಯೋಜನೆಗಳ ತಿಳಿಸಿಕೊಡುವುದು ಉತ್ತಮ ಕೆಲಸ ಎಂದು ಅವರು ಪ್ರಶಂಸೆ ವ್ಯಕ್ತಪಡಿಸಿದರು.

ಒಂದಲ್ಲ ಒಂದು ದಿನ ರೈತರ ಜಮೀನಿಗೆ ಬೆಲೆ ಕಟ್ಟಲಾಗದ ಸಂದರ್ಭ ಬರುತ್ತದೆ. ಕೃಷಿ ಸಂಬಂಧಿತ ಎಲ್ಲಾ ಇಲಾಖೆಯ ಯೋಜನೆಗಳನ್ನು ಬಳಸಿಕೊಂಡು ರೈತರು ಸದೃಢರಾಗಬೇಕು. ಕೃಷಿ ಬದುಕಿನಲ್ಲಿ ಹುಮ್ಮಸ್ಸು ಕಳೆದುಕೊಳ್ಳಬಾರದೆಂದು ಅವರು ಕಿವಿಮಾತು ಹೇಳಿದರು.

ಸಹಾಯಕ ಕೃಷಿ ನಿರ್ದೇಶಕ ಯು.ಎಂ.ಪ್ರಕಾಶ್ ಕುಮಾರ್ ಅವರು ಮಾತನಾಡಿ, ಮಳೆ ಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆ ಬ್ಯಾಕರವಳ್ಳಿ ಮತ್ತು ಕುರುಭತ್ತೂರು ಗ್ರಾಮ ಪಂಚಾಯಿತಿಗಳ ಎಲ್ಲಾ ಗ್ರಾಮಗಳ ಎಲ್ಲಾ ವರ್ಗದ ರೈತ ಫಲಾನುಭವಿಗಳಿಗೆ ಸಮಾನ ಸಹಾಯಧನದಲ್ಲಿ ಹೈನುಗಾರಿಕೆ, ಪಶು ಸಂಗೋಪನೆ, ವಿಶಿಷ್ಟ ತೋಟಗಾರಿಕೆ, ಅರಣ್ಯ ಮತ್ತು ಇತರೆ ಬೆಳೆ ಪದ್ಧತಿ ಅಳವಡಿಕೆಗಾಗಿ ಹಾಗು ಹಸು, ಮೇಕೆ, ಎಮ್ಮೆ, ಕೋಳಿ ಮತ್ತು ಬಾತುಕೋಳಿ ಘಟಕಗಳನ್ನು ಅಳವಡಿಸಿಕೊಳ್ಳಲು ಅವುಗಳನ್ನು ನೂತನವಾಗಿ ತಾಲ್ಲೂಕಿನ ವ್ಯಾಪ್ತಿಯ ಹೊರಗಿನಿಂದ ಖರೀದಿಸಿದ ಸೂಕ್ತ ದಾಖಲಾತಿಗಳನ್ನು ಯಾವುದೇ ವರ್ಗದ ರೈತರು ನೀಡಿದರೆ ಒಬ್ಬರಿಗೆ ಸಮಗ್ರ ಪದ್ಧತಿ ಅಳವಡಿಕೆಗೆ ಗರಿಷ್ಠ 30 ಸಾವಿರ ರೂ. ಸಹಾಯಧನವನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿಸಲಾಗುವುದು. 2025–26ನೇ ಸಾಲಿನಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ಮಾತ್ರ ಈ ಯೋಜನೆ ಅನುಷ್ಠಾನಗೊಳಿಸಿದ್ದು, 2014ನೇ ಸಾಲಿನಿಂದ ಯೋಜನೆಗೆ ಅವಕಾಶವಾಗಿದ್ದರೂ ಪ್ರಥಮವಾಗಿ ತಾಲ್ಲೂಕಿನಲ್ಲಿ ಅನುಷ್ಠಾನಗೊಳ್ಳುತ್ತಿರುವುದು ವಿಶೇಷ ಎಂದು ತಿಳಿಸಿದರು.

ಕ್ಷೇತ್ರ ಮಟ್ಟದಲ್ಲಿ ಯಶಸ್ವಿಯಾಗಿ ಕೆಲಸ ಕಾರ್ಯನಿರ್ವಹಿಸಿ ರೈತರಿಗೆ ಸಹಕರಿಸಿದ ಹೆನ್ನಲಿ ವಿರೂಪಾಕ್ಷ ಮತ್ತು ಹೆಗ್ಗದ್ದೆ ಸಿದ್ದೇಶ್ ಅವರಿಗೆ ಸನ್ಮಾನಿಸಲಾಯಿತು.

ನಿಡಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೆಂಕಟೇಶ್, ಗ್ರಾಮ ಪಂಚಾಯಿತಿ ಸದಸ್ಯ ಸತ್ಯಜಿತ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಕಮಲಮ್ಮ, ಹಾಲು ಉತ್ಪಾದಕರ ಸಂಘದ ಕಾರ್ಯದರ್ಶಿ ಸುರೇಶ್, ಕುಶಾಲಪ್ಪ, ಉದಯ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಧರ್ಮಪ್ಪ, ಕೃಷಿ ಅಧಿಕಾರಿ ಕೇಶವ ಮೂರ್ತಿ, ತಾಂತ್ರಿಕ ವ್ಯವಸ್ಥಾಪಕ ಶ್ರವಣ್, ತಾಂತ್ರಿಕ ವ್ಯವಸ್ಥಾಪಕಿ ಸುಷ್ಮಾ, ಗ್ರಾಮ ಆಡಳಿತ ಅಧಿಕಾರಿ ಸರಿತಾ ಇತರರಿದ್ದರು.

# ಬಿಜೆಪಿ ಕಾರ್ಯಕರ್ತೆ ಮೇಲೆ ದೌರ್ಜನ್ಯ ಖಂಡಿಸಿ ಪ್ರತಿಭಟನೆ

## ವಿವಸ್ತ್ರಗೊಳಿಸಿ ಹಲ್ಲೆ ನಡೆಸಿರುವುದು ನಾಗರೀಕ ಸಮಾಜ ತಲೆತಗ್ಗಿಸುವಂತಹದ್ದು

• ಪ್ರಜೋದಯ ವರದಿ

**ಹಾಸನ:** ಹುಬ್ಬಳ್ಳಿಯಲ್ಲಿ ಬಿಜೆಪಿ ಮಹಿಳಾ ಕಾರ್ಯಕರ್ತೆ ಸುಜಾತ ಹಂಡಿ ಅವರನ್ನು ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ್ದಾರೆ ಎನ್ನಲಾದ ಘಟನೆ ಖಂಡಿಸಿ ಬಿಜೆಪಿ ಮಹಿಳಾ ಮೋರ್ಚಾದಿಂದ ಶನಿವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಬಿಜೆಪಿ ಮಹಿಳಾ ಮೋರ್ಚಾ ಆಲೂರು ತಾಲ್ಲೂಕು ಮಂಡಲ ಅಧ್ಯಕ್ಷೆ ಉಮಾ ರವಿಪ್ರಕಾಶ್ ಅವರು ಮಾತನಾಡಿ, ಜ.5 ರಂದು ಹುಬ್ಬಳ್ಳಿಯಲ್ಲಿ ನಡೆದ ಈ ಘಟನೆ ನಾಗರಿಕ ಸಮಾಜ ತಲೆತಗ್ಗಿಸುವಂತಹದ್ದು, ಮಹಿಳೆಯರಿಗೆ ಗೌರವ ನೀಡುವ ಸಮಾಜದಲ್ಲಿ ರಾಜಕೀಯ ದ್ವೇಷಕ್ಕಾಗಿ ಒಬ್ಬ ಮಹಿಳೆಯ ಮೇಲೆ ಸಾರ್ವಜನಿಕವಾಗಿ ದೌರ್ಜನ್ಯ ಎಸಗಿರುವುದು ಅಕ್ಷಮ್ಯ ಅಪರಾಧ. ಕಾಂಗ್ರೆಸ್ ಕಾರ್ಪೊರೇಟರ್ ಸುವರ್ಣ ನೀಡಿದ ದೂರಿನ ನೆಪದಲ್ಲಿ ಪೊಲೀಸರು ತಮ್ಮ ದರ್ಪ ತೋರಿಸಿದ್ದಾರೆ. ಅದರಿಂದ ರಾಜ್ಯದಲ್ಲಿ ಮಹಿಳೆಯರು ಎಷ್ಟು ಅಸುರಕ್ಷಿತರಾಗಿದ್ದಾರೆ ಎಂಬುದು



ಸ್ಪಷ್ಟವಾಗುತ್ತದೆ. ಪೊಲೀಸ್ ಇಲಾಖೆಯ ಮೇಲೆ ಸರ್ಕಾರದ ಹಿಡಿತ ಇಲ್ಲದಿರುವುದಕ್ಕೆ ಇದೇ ಸಾಕ್ಷಿ ಎಂದು ಟೀಕಿಸಿದರು.

ಸುಳ್ಯದ ಶಾಸಕಿ ಭಾಗಿರತಿ ಮುರುಳ್ಯ ಅವರ ಬಗ್ಗೆ ಅವಮಾನಕಾರಕ ಪೋಸ್ಟ್ ಹಾಕಿರುವುದು ತೀವ್ರ ಖಂಡನೀಯ. ಇದು ದಲಿತ ಮಹಿಳಾ ಶಾಸಕರಿಗೆ ಮಾಡಿದ ಅಪಮಾನವಾಗಿದ್ದು, ಜೀವಂತ ಜನಪ್ರತಿನಿಧಿಗೆ ಶ್ರದ್ಧಾಂಜಲಿ ಪೋಸ್ಟ್ ಹಾಕಿರುವ ಬಿಲ್ಲವ ಸಂದೇಶ್ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕು. ಪೊಲೀಸ್ ವ್ಯವಸ್ಥೆ ಕಾನೂನು ಸುವ್ಯವಸ್ಥೆ ಕಾಪಾಡಲು ಇರಬೇಕೆ ಹೊರತು, ಗೂಂಡಾಗಿರಿಗೆ ಅಲ್ಲ. ಮಹಿಳೆಯರ ಮೇಲೆ ದರ್ಪ ತೋರಿದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ, ಗೃಹ ಸಚಿವರು ಪ್ರಕರಣ ಕುರಿತು ಕೂಲಂಕಷ ತನಿಖೆ ನಡೆಸಬೇಕು. ಇಂತಹ ಘಟನೆಗಳು ಮುಂದುವರಿಯದಂತೆ ಸರ್ಕಾರ ಎಚ್ಚರ ವಹಿಸಬೇಕು ಹಾಗೂ ಅನ್ಯಾಯಕ್ಕೊಳಗಾದ ಬಿಜೆಪಿ ಕಾರ್ಯಕರ್ತರಿಗೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಬಿ.ಎಂ.ನೇತ್ರಾವತಿ ಮಂಜುನಾಥ್, ಜಿಲ್ಲಾ ಕಮಿಟಿ ಶೋಭಾ ಗಣೇಶ್, ವೇದಾವತಿ, ಕಾರ್ಯದರ್ಶಿ ಅಂಬಿಕಾ, ವೀಣಾಲೋಕೇಶ್, ರೇಖಾ ವಿರೂಪಾಕ್ಷ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ನಗರಾಧ್ಯಕ್ಷ ಯೋಗೀಶ್, ಚನ್ನಕೇಶವ, ಶೋಭನ್ ಬಾಬು ಇದ್ದರು.

## ಸ್ವಾರ್ಥಕ್ಕೆ ಸ್ಥಾನವಿಲ್ಲ

» ಮೊದಲನೇ ಪುಟದಿಂದ

ಮಾಡಿದ್ದಾರೆಂದು ಪ್ರಶ್ನಿಸಿದ ಅವರು, ಮಳೆಯಿಂದ ಬಿದ್ದು ಹೋಗಿರುವ ಮನೆಗಳಿಗೆ ಇನ್ನೂ ಪರಿಹಾರ ನೀಡಿಲ್ಲ, ಹಿಂದಿನ ಸರ್ಕಾರದ ಬಾಕಿ ಹಣವನ್ನು ವಿತರಿಸಿಲ್ಲ. ಬೆಳೆನಾಶಕ್ಕೆ ಸೂಕ್ತ ಪರಿಹಾರ ನೀಡಿಲ್ಲ. ಆಲೂಗಡ್ಡೆ ಬೆಳೆ ಕುಂಠಿತವಾದ ನಂತರ ರೈತರು ಮೆಕ್ಕೆಜೋಳ ಹಾಗೂ ಶುಂಠಿ ಬೆಳೆಗೆ ಮುಂದಾದರು. ಸರ್ಕಾರ ಸರಿಯಾದ ರೀತಿಯಲ್ಲಿ ಮೆಕ್ಕೆಜೋಳ ಖರೀದಿ ಮಾಡುತ್ತಿಲ್ಲ. ರೈತರ ಬದಲು ಖಾಸಗಿ ವ್ಯಾಪಾರಿಗಳಿಂದ ಖರೀದಿ ಮಾಡುತ್ತಿದೆ. ಈ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದರೂ ಒಂದೇ ಒಂದು ಸ್ಥಳೀಯ ಸಂಸ್ಥೆಯ ಚುನಾವಣೆಯನ್ನು ನಡೆಸಲು ತಾಕತ್ತಿಲ್ಲ ಎಂದು ಟೀಕಿಸಿದರು. ಕ್ರಿಯೆ ಇರಬೇಕು, ನಾಟಕ ಬೇಡ

ಅರಸೀಕೆರೆಗೆ ನದಿ ಮೂಲದಿಂದ ಕುಡಿಯುವ ನೀರು ತರಲು ನಾನು ಕಣ್ಣೀರು ಹಾಕಿದ್ದೇನೆಂಬ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಮನುಷ್ಯನಿಗೆ ಕ್ರಿಯೆ ಇರಬೇಕು, ನಾಟಕ ಹೆಚ್ಚು ಇರಬಾರದು. ಹಿಂದೆ ಯಡಿಯೂರಪ್ಪ ಅವರ ಸರ್ಕಾರ ಇದ್ದಾಗ ಈಶ್ವರಪ್ಪ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಅವರು ಕುಡಿಯುವ ನೀರಿನ ಯೋಜನೆಗೆ ಅನುಮೋದನೆ ನೀಡಿ ಅಡಿಗಲ್ಲು ಹಾಕಿದ್ದರು. ಆಗ ನಾವೆಲ್ಲರೂ ಇದ್ದೇವು. ಒಬ್ಬರೇ ಮಾಡಿದ್ದಲ್ಲ. ಅದನ್ನು ಜೇನುಕಲ್ ಸಿದ್ದೇಶ್ವರನ ಮುಂದೆ ಬಂದು ಹೇಳಲಿ ಎಂದು ಸವಾಲು ಹಾಕಿದರು.

# ಸಹಕಾರ ಸಂಘಕ್ಕೆ ನಾಗರಾಜು ಅಧ್ಯಕ್ಷ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಜುಟ್ಟನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೂಮಡಿಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಪಿ.ಕೆ. ನಾಗರಾಜು ಹಾಗೂ ಉಪಾಧ್ಯಕ್ಷರಾಗಿ ಬೇಡರಹಳ್ಳಿಯ ಮಂಜಪ್ಪ ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ.

ಸಂಘಕ್ಕೆ ನಡೆದ ಚುನಾವಣೆಯಲ್ಲಿ 11 ನಿರ್ದೇಶಕರುಗಳು ಆಯ್ಕೆಯಾಗಿದ್ದರು. ಶುಕ್ರವಾರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಪಿ.ಕೆ.ನಾಗರಾಜು ಮತ್ತು ಬೇಡರಹಳ್ಳಿಯ ಮಂಜಪ್ಪ ಹೊರತುಪಡಿಸಿ ಮತ್ತ್ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಸಹಕಾರ ಇಲಾಖೆಯ ಅಭಿವೃದ್ಧಿ ಅಧಿಕಾರಿ ಶಕುಂತಲಾ ಘೋಷಿಸಿದರು.

ಈ ಸಂದರ್ಭದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ ನೂತನ ಆಡಳಿತ ಮಂಡಳಿಯವರನ್ನು ಅಭಿನಂದಿಸಿ ಮಾತನಾಡಿ, ಕೃಷಿ ಪತ್ತಿನ ಸಹಕಾರ ಸಂಘದಿಂದ ಪಡೆದ ಕೃಷಿ ಸಾಲವನ್ನು ಬೇರೆ ಯಾವುದೇ ತರಹದ ಉದ್ದೇಶಗಳಿಗೆ ಬಳಸಿಕೊಳ್ಳದೇ ಬೆಳೆಗಾಗಿಯೇ ಉಪಯೋಗಿಸಿಕೊಳ್ಳಿ ಎಂದು ಸಲಹೆ ನೀಡಿದರು. ಕೃಷಿಗೆ ಪಡೆದ ಬೆಳೆ ಸಾಲವನ್ನು ಸಕಾಲದಲ್ಲಿ ಮರುಪಾವತಿಸುವುದರಿಂದ ಹೊಸ ಸಾಲ ಅಪೇಕ್ಷಿಸುವ ರೈತರಿಗೂ ವಿತರಿಸಲು ಅನುಕೂಲವಾಗುತ್ತದೆ ಎಂದು ಅವರು ತಿಳಿಸಿದರು.

ನಿರ್ದೇಶಕರುಗಳಾದ ಬಸವರಾಜು ಪ್ರಭು, ಸ್ನೇಹಜೀವಿ ಮಂಜು ಗಣೇಶ, ನಿಖಿಲ್ ಬೋರೇಗೌಡ, ಕೃಷ್ಣೇಗೌಡ, ಶಕುಂತಲಾ ಮಲ್ಲೇಶ್, ಶಾಂತ ಪುಟ್ಟಸ್ವಾಮಿ, ರಾಜಶೇಖರ್, ಮುಖಂಡರುಗಳಾದ ದೇವರಾಜೇಗೌಡ, ಪಿ.ಕೆ.ಮಂಜೇಗೌಡ, ದೊಡ್ಡೇಗೌಡ, ಬೋರೇಗೌಡ, ದಾಸರಹಳ್ಳಿ ರಂಗೇಗೌಡ, ಎಂ.ಪಿ.ಪ್ರಸನ್ನಕುಮಾರ್, ಶ್ರೀನಿವಾಸ, ಎ.ಟಿ. ದೇವರಾಜು, ವಾಸು, ರಮೇಶ್, ಅರುಣ್, ಶಿವಣ್ಣ, ಸುನೀಲ್, ಯೋಗೇಶ್, ನಾಗೇಶ್, ಪ್ರಭಾಕರ್, ಬಾಬು, ಧರಣೇಶ್, ಸಿಇಒ ಪ್ರಕಾಶ್, ಮೇಲ್ವಚಾರಕ ಮಧು ಇನ್ನಿತರರು ಪಾಲ್ಗೊಂಡಿದ್ದರು.

## ಎಂದೆಂದಿಗೂ ಪ್ರತ್ಯೇಕ ಧರ್ಮ

» ಮೊದಲನೇ ಪುಟದಿಂದ

ಅಭ್ಯರ್ಥಿಯಾಗಿ ಮೊದಲ ಬಾರಿಗೆ ನಾನು ಸ್ಪರ್ಧಿಸಿದ ಸಂದರ್ಭದಲ್ಲಿ ಅವರ ಆಶೀರ್ವಾದ ಪಡೆಯಲು ಮಠಕ್ಕೆ ಆಗಮಿಸಿದಾಗ ಕಣಕಟ್ಟೆ ಹೋಬಳಿಗೆ ನೀರು ತಗೊಂಡು ಬಾರಯ್ಯ ಎಂಬ ಆಶೀರ್ವಾದದೊಂದಿಗೆ ಆದೇಶ ಮಾಡಿದ್ದರು. ಇಂದು ಅವರ ಆಶೀರ್ವಾದ ಫಲಿಸಿದ್ದು ಕಣಕಟ್ಟೆ ಹೋಬಳಿಯ ಕೆರೆಕಟ್ಟೆಗಳಲ್ಲಿ ಹೇಮಾವತಿ ನೀರು ತುಂಬಿರುವುದೇ ಸಾಕ್ಷಿ ಎಂದರು.

ಸಮಾರಂಭದಲ್ಲಿ ಕೆರಗೋಡಿ ರಂಗಾಪುರ ಮಠದ ಗುರು ಪರದೇಶಿ ಕೇಂದ್ರ ಸ್ವಾಮೀಜಿ, ಕೇದಿಗೆ ಮಠದ ಜಯ ಚಂದ್ರಶೇಖರ ಸ್ವಾಮೀಜಿ, ಪಾಂಡುಮಟ್ಟಿ ವಿರಕ್ತ ಮಠದ ಗುರುಬಸವ ಸ್ವಾಮೀಜಿ, ಕನಕಗಿರಿ ಮಠದ ಚನ್ನಮಲ್ಲ ಸ್ವಾಮೀಜಿ, ಡಿ.ಎಂ.ಕುರ್ಕೆ ಬೂದಿಹಾಳ್ ವಿರಕ್ತ ಮಠದ ಶಶಿಕರ ಸಿದ್ದ ಬಸವ ಸ್ವಾಮೀಜಿ, ಮಾರ್ಗೊಂಡನಹಳ್ಳಿ ಮಠದ ಅಭಿನವ ಬಸವಲಿಂಗ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಸಾಹಿತಿ ಚಟ್ನಳ್ಳಿ ಮಹೇಶ್, ಚಲನಚಿತ್ರ ನಟ ಚೇತನ್, ಕಾಂಗ್ರೆಸ್ ಮುಖಂಡ ಜಿ.ಬಿ.ಶಶಿಧರ್ ಮಾತನಾಡಿದರು.

ಜಿಪಂ ಮಾಜಿ ಸದಸ್ಯ ಎಂ.ಎಸ್.ಪಿ. ಸ್ವಾಮಿ, ವೀರಶೈವ ಸಮಾಜ ಮುಖಂಡ ಎನ್.ಜಿ.ಮರಳು ಸಿದ್ದಸ್ವಾಮಿ, ಶಿವಕುಮಾರ್, ಓಂಕಾರ ಮೂರ್ತಿ ಉಪಸ್ಥಿತರಿದ್ದರು.

## ಮಕ್ಕಳಲ್ಲಿ ಅಸಾಧಾರಣ ಸ್ಮರಣಶಕ್ತಿ ಇದ್ದು, ಸರಿಯಾದ ದಿಕ್ಕಿನಲ್ಲಿ ಬಳಸಿಕೊಳ್ಳಬೇಕು: ಎಚ್.ಬಿ.ಎಂ.

# ಮಕ್ಕಳ ಮೇಲೆ ಒತ್ತಡ ಹೇರದೆ ಆಸಕ್ತಿಗೆ ತಕ್ಕ ಶಿಕ್ಷಣ ನೀಡಿ

• ಪ್ರಜೋದಯ ವರದಿ

ಸಕಲೇಶಪುರ: ಮಕ್ಕಳನ್ನು ಅನಾವಶ್ಯಕ ಒತ್ತಡಕ್ಕೆ ಒಳಪಡಿಸದೆ, ಅವರಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಆ ಕ್ಷೇತ್ರದಲ್ಲೇ ಶಿಕ್ಷಣ ನೀಡಬೇಕು ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ. ಮದನಗೌಡ ಅವರು ಹೇಳಿದರು.

ಪಟ್ಟಣದ ಶ್ರೀನಿವಾಸ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಟಷ್ಕೇರಿಯ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪುಟ್ಟ ಮಕ್ಕಳ ನೃತ್ಯ, ಅವರ ಶಿಸ್ತು ಮತ್ತು ಆತ್ಮವಿಶ್ವಾಸ ನೋಡಿದಾಗ ಅಪಾರ ಸಂತೋಷವಾಯಿತು ಎಂದರಲ್ಲದೆ, ಕೇವಲ ನಾಲ್ಕು ವರ್ಷಗಳ ಅವಧಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿರುವುದು ಅಭಿನಂದನಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮಗಳಲ್ಲಿ ಬಳಸಿದ ವೇಷಭೂಷಣಗಳು ವ್ಯರ್ಥವಾಗದೆ,



ಇತರೆ ಬಳಕೆಗೆ ಕೂಡ ಉಪಯುಕ್ತವಾಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಇದು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯ ಸಂಕೇತ ಎಂದು ಹೇಳಿದರಲ್ಲದೆ, ಇಂದಿನ ಮಕ್ಕಳು ಅತಿ ಬೇಗ ಗ್ರಹಿಸುವ ಶಕ್ತಿಯನ್ನು ಹೊಂದಿದ್ದಾರೆ. ಒಂದು ವರ್ಷದ ಮಗು ಕೂಡ ಅಪಾರ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತಿರುವುದನ್ನು ಕಾಣಬಹುದು. ಇದರಿಂದ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಇನ್ನಷ್ಟು ಸುಧಾರಣೆ ಅಗತ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ. ಮಕ್ಕಳಲ್ಲಿ ಅಸಾಧಾರಣ ಸ್ಮರಣಶಕ್ತಿ ಇದ್ದು, ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿಕೊಳ್ಳಬೇಕು ಎಂದರು.

ಮಕ್ಕಳನ್ನು ಬಲವಂತವಾಗಿ ಇಂಜಿನಿಯರ್ ಅಥವಾ ಡಾಕ್ಟರ್ ಆಗಲೇಬೇಕು ಎಂಬ ಮನೋಭಾವ ತ್ಯಜಿಸಬೇಕು. ಅವರಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಅದಕ್ಕೆ ಆದ್ಯತೆ ನೀಡಿದರೆ ಮಾತ್ರ ಅವರು ಜೀವನದಲ್ಲಿ ಸಾಧನೆ ಮಾಡುತ್ತಾರೆ. ಮಕ್ಕಳ ಆಹಾರ ಪದ್ಧತಿಯ ಕುರಿತು ಎಚ್ಚರಿಕೆ ನೀಡಿದ ಅವರು, ಇಂದಿನ ಆಹಾರದ ಗುಣಮಟ್ಟ ಕುಸಿದಿರುವುದರಿಂದ ಪೋಷಕರು ಎಚ್ಚರಿಕೆಯಿಂದಿರಬೇಕು. ಸಾಧ್ಯವಾದಷ್ಟು ತಂಪು ಪಾನೀಯಗಳು, ಅತಿಯಾದ ಮಾಂಸಾಹಾರ, ವಿಶೇಷವಾಗಿ ಚರ್ಮ ಸಹಿತ ಕೋಳಿಮಾಂಸವನ್ನು ತಪ್ಪಿಸಿ, ಆರೋಗ್ಯಕರ ಆಹಾರಕ್ಕೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರಲ್ಲದೆ, ಇದು ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅಗತ್ಯವಿದೆ ಎಂದು ತಿಳಿಸಿದರು.

ಶಿಕ್ಷಣ ಸಂಸ್ಥೆಗಳು ಕೇವಲ ಪಠ್ಯಾಧಾರಿತ ಶಿಕ್ಷಣವಲ್ಲದೆ, ಮಾನವೀಯ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸಬೇಕು. ಇಂದಿನ ಡಿಜಿಟಲ್ ಹಾಗೂ ಕೃತಕ ಬುದ್ಧಿಮತ್ತೆ (ಎಐ) ಯುಗದಲ್ಲಿ ಮಕ್ಕಳಿಗೆ ಭಯ ಹುಟ್ಟಿಸದೆ, ಆತ್ಮಸ್ಥೈರ್ಯ ತುಂಬುವ ಕೆಲಸ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಸೋಶಿಯಲ್ ಮೀಡಿಯಾ ಮತ್ತು ತಂತ್ರಜ್ಞಾನ ವೇಗವಾಗಿ ಬದಲಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ, ಜೀವನವನ್ನು ಸಂತೋಷದಿಂದ ಬದುಕುವ ಮನೋಭಾವವನ್ನು ಮಕ್ಕಳಿಗೆ ಕಲಿಸಬೇಕು. ಕುಟುಂಬದೊಂದಿಗೆ ಸಮಯ ಕಳೆಯುವುದು, ಪ್ರವಾಸ ಮಾಡುವುದು, ಪ್ರಕೃತಿಯನ್ನು ಆಸ್ವಾದಿಸುವುದು ಮಕ್ಕಳ ಮನಸ್ಸಿಗೆ ಒಳ್ಳೆಯ ವಾತಾವರಣ ಸೃಷ್ಟಿಸುತ್ತದೆ ಎಂದು ಹೇಳಿದರು.

ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಕಿರಣ್, ಗಿರೀಶ್, ಚಂದ್ರಶೇಖರ್, ರಕ್ಷಿತ್ ಸೇರಿದಂತೆ ಶಿಕ್ಷಕರು, ಸಿಬ್ಬಂದಿ ಹಾಗೂ ಪೋಷಕರು ಉಪಸ್ಥಿತರಿದ್ದರು.


## ಹೊಳೆನರಸೀಪುರದ ಹಿರಿಯ ವ್ಯವಹಾರಿಕ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಆರ್.ಎ.ನಂ.4/2016

ಅಪೀಲುದಾರ: ಆರ್.ಭಾಷಂ ಬಿನ್ ಲೇ|| ಎಂ.ಎ.ರಾಮಾನುಜ ಅಯ್ಯಂಗಾರ್, ವಕೀಲರು, ಬಸವನಗುಡಿ ಬೀದಿ, ಹೊಳೆನರಸೀಪುರ.

**ವಿರುದ್ಧ**

ಪ್ರತಿವಾದಿಗಳು : ಮೃತ ಮರಿಗೌಡರ ಕಾನೂನುಬದ್ಧ ವಾರಸುದಾರರಾದ

**ಕೋರ್ಟ್ ನೋಟೀಸ್**

ಅಪೀಲುದಾರರು ಮೂಲ ದಾವೆಯಲ್ಲಿ ನೀಡಲಾದ ಆದೇಶವನ್ನು ಪ್ರಶ್ನಿಸಿ ಆರ್.ಭಾಷಂ ಬಿನ್ ಲೇ|| ಎಂ.ಎ.ರಾಮಾನುಜ ಅಯ್ಯಂಗಾರ್ ವಕೀಲರು, ಬಸವನಗುಡಿ ಬೀದಿ, ಹೊಳೆನರಸೀಪುರ. ದಾಖಲಿಸಿದ್ದು, ಈ ಪ್ರಕರಣದಲ್ಲಿನ ಪ್ರತಿವಾದಿ ಆರ್.2 (ಬಿ) ಯಶೋಧಮ್ಮ ತಂದೆ: ಲೇ|| ಮರಿಗೌಡ ವಾಸ:– ಜೈನಿಗರ ಬೀದಿ, ವಾರ್ಡ್ ನಂ.05 ಹೊಳೆನರಸೀಪುರ ಪಟ್ಟಣ, ಹಾಸನ ಜಿಲ್ಲೆ ಆದ ನಿಮಗೆ ಈ ನ್ಯಾಯಾಲಯದಿಂದ ಹಲವು ನೋಟೀಸ್‌ಗಳನ್ನು ಜಾರಿಗಳಿಸಿದರೂ ಸಹಃ ಸದರೀ ನೋಟೀಸುಗಳು ಸಮರ್ಪಕವಾಗಿ ಜಾರಿಯಾಗಿಲ್ಲ. ಆದುದರಿಂದ ನ್ಯಾಯಾಲಯದ ನೋಟೀಸ್ ಮೂಲಕ ನೀಡಿದ್ದು, ಈ ಅಪೀಲಿನ ವಿಚಾರಣೆಗೆ ನಿಗದಿಪಡಿಸಲಾದ ದಿ. 24/02/2026 ರಂದು ನೀವು ಖುದ್ದಾಗಿ/ ನಿಮ್ಮ ವಕೀಲರ ಮೂಲಕ ಈ ನ್ಯಾಯಾಲಯದ ಮುಂದೆ ಹಾಜರಾಗಬೇಕೆಂದು ಆದೇಶಿಸಲಾಗಿದೆ. ನೀವು ಹಾಜರಾಗಲು ವಿಫಲರಾದಲ್ಲಿ, ಅಪೀಲುದಾರರು ಸಲ್ಲಿಸಿರುವ ಅಪೀಲನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ದಿನಾಂಕ: 09/01/2026 ರಂದು ನೀಡಲಾಗಿದೆ.

ಅಪೀಲುದಾರರು
ಸ್ಥಳ : ಹೊಳೆನರಸೀಪುರ
ದಿನಾಂಕ: 06.01.2026

(ಶಿರಸ್ತೇದಾರರು)
ನ್ಯಾಯಾಲಯದ ಅಧಿಕಾರಿಗಳ ಮೂಲಕ
ಸೀನಿಯರ್ ಸಿವಿಲ್ ಜಡ್ಜ್‌ರವರ
ನ್ಯಾಯಾಲಯ, ಹೊಳೆನರಸೀಪುರ.


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019

CMYK CMYK CMYK CMYK